# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 201 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 12.02.2025 • ಬುಧವಾರ • ಪುಟ:04 • ಬೆಲೆ:2
Volume:02 • Issue: 201 • PRGI No:KARKAN/2023/88055 • VIJAYANAGARA • 12.02.2025 • Wednesday • Page:04 • Rs:2



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+
Digital E-PAPER READERS



No.1 HAMPI TIMES LEADING VIJAYANAGARA District News Paper
Contact for Advertisements: 9448633038



ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com

ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...

ಹಂಪಿ ಟೈಮ್ಸ್ ಇ-ಪೇಪರ್

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!


# ಮೈಲಾರದಲ್ಲಿ 24 / 7 ಆರೋಗ್ಯ ಸೇವೆ

### ಜಾತ್ರಾ ನೋಡಲ್ ಅಧಿಕಾರಿ ಡಾ.ಭಾಸ್ಕರ್ ಹೇಳಿಕೆ। ನಾಲ್ಕು ಕಡೆ ಚಿಕಿತ್ಸಾ ಕೇಂದ್ರ। 400 ಸಿಬ್ಬಂದಿ ನಿಯೋಜನೆ



■ **ಹಂಪಿ ಟೈಮ್ಸ್ ಮೈಲಾರ**

ಮೈಲಾರ ಜಾತ್ರೆ ನಿಮಿತ್ತ ಫೆ.11 ರಿಂದ ಫೆ.16ರ ವರಗೆ ಮೈಲಾರದ ಡಂಕನಮರಡಿ, ಗುರುಪೀಠ, ಕಾರ್ಣಿಕೋತ್ಸವ ಏರಿಯಾ ಸೇರಿದಂತೆ ನಾಲ್ಕು ಕಡೆ ತುರ್ತು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಜಾತ್ರಾ ನೋಡಲ್ ಅಧಿಕಾರಿ ಹಾಗೂ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಭಾಸ್ಕರ್ ಹೇಳಿದರು.

ಮೈಲಾರದಲ್ಲಿ ಮಂಗಳವಾರ ಆರೋಗ್ಯ ಇಲಾಖೆಯಿಂದ ವೈದ್ಯಕೀಯ ಸೇವೆಗಾಗಿ 400 ಸಿಬ್ಬಂದಿಗಳನ್ನು 24/7 ಸೇವೆ ಒದಗಿಸಲು ಮೂರು ತಂಡಗಳನ್ನಾಗಿ ನಿಯೋಜಿಸಿ, ಸಲಹೆ ಸೂಚನೆಗಳನ್ನು ನೀಡಿ ಮಾತನಾಡಿದರು. ಜನರ ಆರೋಗ್ಯ ನಮ್ಮ ಕರ್ತವ್ಯವಾಗಿದ್ದು, ಸುರಕ್ಷತೆಯತ್ತ ಹೆಚ್ಚಿನ ಗಮನಹರಿಸಬೇಕು. ವೈದ್ಯರು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ, ಫಾರ್ಮಸಿ ಅಧಿಕಾರಿಗಳು, ಪ್ರಯೋಗಶಾಲಾ ತಂತ್ರಜ್ಞರು, ಶುಶ್ರೂಷಣಾಧಿಕಾರಿಗಳು, ಡಿ ಗ್ರೂಪ್ ಸಿಬ್ಬಂದಿ ಸೇರಿದಂತೆ ಆರೋಗ್ಯ ಸೇವಕರು ಜನರಿಗೆ ಉತ್ತಮ ಸೇವೆ ನೀಡಬೇಕೆಂದು ಸೂಚಿಸಿದರು. ಬಿಸಿಲಿನ ತಾಪಮಾನ ಹೆಚ್ಚುತ್ತಿದ್ದು, ಜಾತ್ರೆಗೆ ಆಗಮಿಸುವ ಭಕ್ತರಿಗೆ ಶುದ್ಧಕುಡಿಯುವ ನೀರು ಪೂರೈಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಕುಡಿಯುವ ನೀರಿಗೆ ಸಮರ್ಪಕ ಕ್ಲೋರಿನ್ ಬಳಕೆ, ಫಾಗಿಂಗ್ ಸೇರಿದಂತೆ ಸ್ವಚ್ಛತೆ ಕಾಯ್ದುಕೊಳ್ಳಬೇಕು ಎಂದರು.

ಆರೋಗ್ಯ ಇಲಾಖೆಯ ಶಿಕ್ಷಣಾಧಿಕಾರಿ ಪಿ.ಡೊಡ್ಡಮನಿ, ಎಂ.ಧರ್ಮನಗೌಡ, ಹಡಗಲಿ ಟಿಎಚ್ಓ ಡಾ.ಸಪ್ನಾ ಕಟ್ಟಿ ಇತರರು ಇದ್ದರು.



# ಶ್ರೀ ಮೈಲಾರಲಿಂಗೇಶ್ವರಸ್ವಾಮಿ ಕಾರ್ಣಿಕೋತ್ಸವ ಫೆ.14 ರಂದು

■ **ಹಂಪಿ ಟೈಮ್ಸ್ ಹೊಸಪೇಟೆ**

ಹೂವಿನಹಡಗಲಿ ತಾಲೂಕಿನ ಮೈಲಾರ ಗ್ರಾಮದ ಶ್ರೀಮೈಲಾರಲಿಂಗೇಶ್ವರ ಸ್ವಾಮಿ ಕಾರ್ಣಿಕೋತ್ಸವ ಫೆ.14 ರಂದು ಬೆಳಗಿನ ಜಾವ 4 ಗಂಟೆಗೆ ಗುಪ್ತ ಮೌನ ಸವಾರಿ ಹಾಗೂ ಸಂಜೆ 5:30 ಕ್ಕೆ ಕಾರ್ಣಿಕೋತ್ಸವ ಜರುಗಲಿದೆ. ಫೆ.14 ರಂದು ಬೆಳಗ್ಗೆ 6 ಗಂಟೆಯಿಂದ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಹಾಗೂ ವಿಶೇಷ ದರ್ಶನ ಮತ್ತು ಸಾರ್ವಜನಿಕ ದರ್ಶನಕ್ಕೆ ಅವಕಾಶ ಇರುತ್ತದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಶ್ರೀಮೈಲಾರಲಿಂಗೇಶ್ವರಸ್ವಾಮಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

## ಆನಂದ ಬಾಣ




## ಮೈಕ್ರೋ ನ್ಯೂಸ್

### ಫೆ.12 ರಂದು ವಿಕಲಚೇತನರ ಪ್ರಗತಿ ಪರಿಶೀಲನಾ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016 ಅನುಷ್ಠಾನಗೊಳಿಸುವ ಬಗ್ಗೆ ಫೆ.12 ರಂದು ಬೆ.11 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಅಂಗವಿಕಲರ ಪ್ರಗತಿ ಪರಿಶೀಲನೆ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಸಭೆಯನ್ನು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅಧ್ಯಕ್ಷತೆ ವಹಿಸಲಿದ್ದು, ರಾಜ್ಯ ಆಯುಕ್ತರಾದ ದಾಸ್ ಸೂರ್ಯವಂಶಿ ಉಪಸ್ಥಿತರಿರಲಿದ್ದಾರೆ. ಸಭೆಯಲ್ಲಿ ಅಂಗವಿಕಲತೆಯನ್ನು ಶೀಘ್ರವಾಗಿ ಪತ್ತೆ ಹಚ್ಚುವ ಕಾರ್ಯಕ್ರಮದ ಬಗ್ಗೆ ಪರಿಶೀಲನೆ. ಅಂಗವಿಕಲರಿಗೆ ಸ್ಥಾಪಿಸಿರುವ ವಿಶೇಷ ನ್ಯಾಯಾಲಯಗಳ ಬಗ್ಗೆ ಪರಿಶೀಲನೆ. ಶೇ.5 ರ ಮೀಸಲಾತಿಯ ಬಗ್ಗೆ ಪರಿಶೀಲನೆ, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಸರ್ಕಾರಿ ವಿಶೇಷ ಶಾಲೆಗಳ ಭೇಟಿ ನೀಡುವರು.

### ಮಾ.6 ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ವಾರ್ಷಿಕ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ವಾರ್ಷಿಕ ಸರ್ವಸದಸ್ಯರ ಸಭೆ ಹಾಗೂ ಸಮಿತಿ ಪುನ:ರಚಿಸುವ ಕುರಿತು ಮಾ.6 ರಂದು ಬೆ.11 ಗಂಟೆಗೆ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿನ ಅಡಿಟೋರಿಯಂ ಹಾಲ್‌ನಲ್ಲಿ ವಾರ್ಷಿಕ ಸಭೆಯನ್ನು ಏರ್ಪಡಿಸಲಾಗಿದೆ. ಜಿಲ್ಲೆಯ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸರ್ವ ಸದಸ್ಯರು ಹಾಜರಾಗಬೇಕೆಂದು ಜಿಲ್ಲಾಧಿಕಾರಿಗಳು ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಅಧ್ಯಕ್ಷರಾದ ಎಂ.ಎಸ್.ದಿವಾಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸುರಕ್ಷಿತ ಅಂತರ್ಜಾಲ ದಿನಾಚರಣೆ। ಜಿಪಂ ಸಿಇಓ ರಾಹುಲ್ ಶರಣಪ್ಪ ಸಂಕನೂರ ಹೇಳಿಕೆ

# ಇಂಟರ್ನೆಟ್ ಬಳಕೆ ಸುರಕ್ಷತೆಗಿರಲಿ ಆದ್ಯತೆ

■ **ಹಂಪಿ ಟೈಮ್ಸ್ ಬಳ್ಳಾರಿ**

ವಿವಿಧ ಕಚೇರಿಯಲ್ಲಿನ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಹಾಗೂ ಸಾರ್ವಜನಿಕರು ಸೇರಿದಂತೆ ಪ್ರತಿಯೊಬ್ಬರೂ ಸುರಕ್ಷಿತ, ನೈತಿಕ ಮತ್ತು ಜವಾಬ್ದಾರಿಯುತ ಇಂಟರ್ನೆಟ್ ಬಳಕೆ ಮಾಡಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ (ಎನ್‌ಐಸಿ) ಹಾಗೂ ಪೊಲೀಸ್ ಇಲಾಖೆ (ಸೈಬರ್ ಸೆಲ್) ಇವರ ಸಂಯುಕ್ತಾಶ್ರಯದಲ್ಲಿ ಸುರಕ್ಷಿತ ಅಂತರ್ಜಾಲ ದಿನಾಚರಣೆ ಅಂಗವಾಗಿ ಅಂತರ್ಜಾಲ ಜಾಗೃತಿ ಕುರಿತು ಜಿಪಂ ನ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಮಂಗಳವಾರ ಏರ್ಪಡಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ತಂತ್ರಜ್ಞಾನ ಮತ್ತು ಇಂಟರ್ನೆಟ್‌ನ ಜವಾಬ್ದಾರಿಯುತ, ಸುರಕ್ಷಿತ ಬಳಕೆ ಪ್ರೋತ್ಸಾಹಿಸಲು ಹಾಗೂ ಆನ್‌ಲೈನ್ ಸುರಕ್ಷತೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಸೇಫರ್ ಇಂಟರ್ನೆಟ್ ಡೇ ಅನ್ನು ಆಚರಿಸಲಾಗುತ್ತದೆ. 'ಜೊತೆಯಾಗಿ, ಉತ್ತಮ ಇಂಟರ್ನೆಟ್ ಕಡೆಗೆ' ಎಂಬುದು ಈ ವರ್ಷದ ಧ್ಯೇಯವಾಕ್ಯವಾಗಿದೆ ಎಂದು ತಿಳಿಸಿದರು.

ಡಿಜಿಟಲ್ ಜಗತ್ತು ಅಭಿವೃದ್ಧಿ ಹೊಂದುತ್ತಿದ್ದಂತೆ ಜನರು, ವಿಶೇಷವಾಗಿ ಮಕ್ಕಳು ಮತ್ತು ಹದಿಹರೆಯದವರು, ಇಂಟರ್ನೆಟ್ ಅನ್ನು ಸುರಕ್ಷಿತವಾಗಿ ಬಳಸಬೇಕು. ಒಳ್ಳೆಯ ಉದ್ದೇಶಕ್ಕಾಗಿ ಅಗತ್ಯವಾದ ಮಾಹಿತಿ ಹೊಂದಲು ಆದ್ಯತೆ ನೀಡಬೇಕು ಎಂದರು.

ಶಿಕ್ಷಣ, ಸಾಮಾಜಿಕ ಸಂವಹನ ಮತ್ತು ವ್ಯವಹಾರಕ್ಕೆ ಹಲವಾರು ಅವಕಾಶಗಳನ್ನು ಇಂಟರ್ನೆಟ್ ಒದಗಿಸಿದೆ. ಇದು ಪ್ರಪಂಚದಾದ್ಯಂತ ಜನರನ್ನು ಒಂದುಗೂಡಿಸುವ ಪ್ರಬಲ ಸಾಧನವಾಗಿದೆ. ಡಿಜಿಟಲ್ ಯುಗದಲ್ಲಿ ಇಂಟರ್ನೆಟ್ ಎಷ್ಟು ಉಪಯುಕ್ತವಾಗಿದೆಯೋ ಅದಕ್ಕಿಂತ ಹೆಚ್ಚು ಅಪಾಯವಾಗಿದೆ. ಹಾಗಾಗಿ ಮಕ್ಕಳಿಂದ ಹಿಡಿದು ಹಿರಿಯವರಿಗೆ ಎಲ್ಲರೂ ಎಚ್ಚರದಿಂದ ಮುನ್ನಡೆಯಬೇಕು ಎಂದು ಜಿಪಂ ಸಿಇಓ ಅವರು ತಿಳಿಸಿದರು.

ಪ್ಯಾನ್, ಆಧಾರ್ ಅಥವಾ ಬ್ಯಾಂಕ್ ವಿವರಗಳಂತಹ ಸೂಕ್ಷ್ಮ ಮಾಹಿತಿಗಳನ್ನು ಕೇಳುವ ಅಪರಿಚಿತ ದೂರವಾಣಿ ಸಂಖ್ಯೆಗಳಿಂದ ಬರುವ ಸುರಕ್ಷಿತವಲ್ಲದ ಯಾವುದೇ ಲಿಂಕ್‌ಗಳನ್ನು ಒತ್ತಬಾರದು ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್



ಅವರು ಮಾತನಾಡಿ, ಡಿಜಿಟಲ್ ಯುಗದಲ್ಲಿ ಸೈಬರ್ ವಂಚನೆಗಳಿಂದ ಜಾಗೃತರಾಗಿರಬೇಕು. ಈ ಕುರಿತು ತಮ್ಮ ನೆರೆ-ಹೊರೆಯವನ್ನು ಎಚ್ಚರಗೊಳಿಸಬೇಕು ಎಂದು ಹೇಳಿದರು.

ಪ್ರತಿಯೊಬ್ಬರು ತಮ್ಮ ಆನ್‌ಲೈನ್ ಖಾತೆಗಳನ್ನು ರಕ್ಷಿಸಲು ಸ್ಟ್ರಾಂಗ್ ಮತ್ತು ವಿಶಿಷ್ಟವಾದ ಪಾಸ್‌ವರ್ಡ್‌ಗಳನ್ನು ಬಳಸಬೇಕು. ಕರೆಗಳ ಮೂಲಕ ಸೂಕ್ಷ್ಮ ವಿವರಗಳಾದ ಓಟಿಪಿ, ಆಧಾರ್, ಪಾನ್ ಹಾಗೂ ಬ್ಯಾಂಕ್ ಖಾತೆಗಳ ಮಾಹಿತಿಗಳನ್ನು ಎಂದಿಗೂ ಹಂಚಿಕೊಳ್ಳಬಾರದು. ಅದೇರೀತಿಯಾಗಿ ಆನ್‌ಲೈನ್ ನಲ್ಲಿ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳಬಾರದು. ಮುಖ್ಯವಾಗಿ ತಮ್ಮ-ತಮ್ಮ ಡಿಜಿಟಲ್ ಗುರುತನ್ನು ರಕ್ಷಿಸಿಕೊಳ್ಳಬೇಕು ಎಂದು ತಿಳಿಸಿದರು.

ಬಳಿಕ ಕಾರ್ಯಾಗಾರದಲ್ಲಿ ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ (ಎನ್‌ಐಸಿ)ದ ಜಿಲ್ಲಾ ನಿರ್ದೇಶಕ ವೆಂಕಟರಮಣ ಅವರು ಸುರಕ್ಷಿತ ಅಂತರ್ಜಾಲ ಕುರಿತು ಸವಿವರವಾಗಿ ಮಾಹಿತಿ ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ಯೋಜನಾ ನಿರ್ದೇಶಕ ವಿನೋದ್ ಕುಮಾರ್, ಮುಖ್ಯ ಲೆಕ್ಕಾಧಿಕಾರಿ ಪರಿಮಳ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.







SSLC ಹಂಪಿ ಟೈಮ್ಸ್ ಮಾರ್ಗದರ್ಶಿ
ಈ ಭಾರಿ ಫಲಿತಾಂಶ ನಮ್ಮದೆ
ಹೈಸ್ಕೋರ್‌ಗಾಗಿ ನಿತ್ಯ ಓದಿ


ಪುಟ. 3ರಲ್ಲಿ

## ಸ್ಟುಡೆಂಟ್ ಕಾಲಂ

# ಪ್ರಯತ್ನಕ್ಕೆ ಫಲ ನಿಶ್ಚಿತ



ಏಣಗಿ ಎಂಬ ಊರಿನಲ್ಲಿ ಒಂದು ದೊಡ್ಡ ಬೆಟ್ಟವಿತ್ತು. ಆ ಊರಿನಲ್ಲಿ ಬಸವರಾಜ ಎಂಬ ಹುಡುಗ ಇದ್ದನು. ಅವನಿಗೆ ಛಲದ ಮನೋಭಾವನೆ ಇತ್ತು. ಒಂದು ದಿನ ಅವನು ಆ ಬೆಟ್ಟವನ್ನು ಹತ್ತ ಬೇಕೆಂದು ತೀರ್ಮಾನ ಮಾಡಿದನು. ಮರುದಿನ ಅವನು ಆ ಬೆಟ್ಟದ ಹತ್ತಿರ ಹೋಗಿ ಬೆಟ್ಟವನ್ನು ಹತ್ತಲು ಪ್ರಯತ್ನಿಸಿದ, ಆದರೆ ಹತ್ತಲು ಆಗಲಿಲ್ಲ ಕಾಲು ಜಾರಿ ಕೆಳಗೆ ಬಿದ್ದ. ಪುನ: ಮರುದಿನ ಬೆಟ್ಟ ಹತ್ತಲು ಪ್ರಯತ್ನಿಸಿದ, ಅಂದು ಕೂಡ ಹತ್ತಲು ಆಗಲಿಲ್ಲ ಹೀಗೆ ನಾಲ್ಕಾರು ದಿನಗಳು ಪ್ರಯತ್ನಿಸಿ ವಿಫಲನಾದ. ಆದರೂ ತನ್ನ ಪ್ರಯತ್ನವನ್ನು ಬಿಡಲಿಲ್ಲ. ಆಗ ಅವನು ಅಲ್ಲಿಯೇ ಇದ್ದ ಒಂದು ಇರುವೆಯನ್ನು ನೋಡುತ್ತಾನೆ. ಆ ಇರುವೆಯು ಬೆಟ್ಟವನ್ನು ಹತ್ತಲು ಪ್ರಯತ್ನಿಸುತ್ತಿರುತ್ತದೆ ಆದರೆ ಅದು ಪದೇ ಪದೇ ಜಾರಿ ಕೆಳಗೆ ಬೀಳುತ್ತದೆ



ಆದರೂ ಇರುವೆಯು ಅದರ ಪ್ರಯತ್ನವನ್ನು ಬಿಡುವುದಿಲ್ಲ ಮತ್ತು ಕೊನೆಗೆ ಅದು ಬೆಟ್ಟ ಹತ್ತುವಲ್ಲಿ ಯಶಸ್ವಿ ಆಗುತ್ತದೆ. ಆಗ ಅವನು ಈ ಸಣ್ಣ ಇರುವೆಯೇ ಬೆಟ್ಟವನ್ನು ಹತ್ತುವುದಾದರೆ ನಾನು ಈ ಬೆಟ್ಟವನ್ನು ಹತ್ತಬಹುದು ಎಂದು ನಿರ್ಧಾರ ಮಾಡಿ, ಪುನಃ ಬೆಟ್ಟವನ್ನು ಹತ್ತಲು ಪ್ರಯತ್ನಿಸಿದ. ಆದರೆ ಅಂದು ಹತ್ತಲಾಗಲಿಲ್ಲ ಸುಸ್ತಾಗಿ ಅಲ್ಲಿದ್ದ ಕೆರೆಯ ದಂಡೆಯ ಮೇಲಿದ್ದ ಮರದ ಕೆಳಗೆ ಕುಳಿತ. ಆ ಮರದ ರಂಬೆಯ ಮೇಲೆ ಗುಬ್ಬಚ್ಚಿಯು ತನ್ನ ಗೂಡನ್ನು ಕಟ್ಟುವುದನ್ನು ನೋಡಿದ. ಹೇಗೆ ಸತತ ಪ್ರಯತ್ನದಿಂದ ಗೂಡನ್ನು ಕಟ್ಟುತ್ತದೆಯೋ ಹಾಗೆ ನಾನು ನನ್ನ ಪ್ರಯತ್ನವನ್ನು ಬಿಡಬಾರದು ಎಂದು ತನ್ನ ಮನದೊಳಗೆ ಅಂದುಕೊಳ್ಳುತ್ತಾ, ಮನೆ ಕಡೆ ಹೆಜ್ಜೆ ಹಾಕಿದ, ಮರುದಿನ ಅವನು ಪುನಃ ಆ ಬೆಟ್ಟವನ್ನು ಹತ್ತಲು ಪ್ರಯತ್ನಿಸಿದ ಅಂದು ಅವನು ಬೆಟ್ಟವನ್ನು ಹತ್ತಲು ಯಶಸ್ವಿಯಾದ ಸತತ ಪ್ರಯತ್ನದಿಂದ ಬಸವರಾಜ ತಾನು ಅಂದುಕೊಂಡಿದ್ದನ್ನು ಸಾಧಿಸಿದ್ದ. ಇದೇ ರೀತಿ ಸತತ ಪ್ರಯತ್ನ ಮಾಡಿದರೆ ಎಂದಿಗೂ ಸೋಲಾಗುವುದಿಲ್ಲ

**– ಸಂಪದ, 9ನೇ ತರಗತಿ**
**ಸರ್ಕಾರಿ ಪ್ರೌಢಶಾಲೆ ಬ್ಯಾಸಿಗಿದೇರಿ, ಹಗರಿಬೊಮ್ಮನಹಳ್ಳಿ**

---

**ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ.**
**ಕೈಯಲ್ಲೊಂದು ಕನ್ನಡ ದಿನ ಪತ್ರಿಕೆ ಇರಲಿ.**
ಡಿ..ವಿ.ಜಿ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

---

**ನಿಮ್ಮ ಪತಿಗೆ ಗೌರವ ನೀಡುವ ಮೂಲಕ ನಿಮ್ಮ ಮಕ್ಕಳ ಗೌರವಕ್ಕೆ ಪಾತ್ರರಾಗಿ. ನಿಮ್ಮ ಪತಿಯನ್ನು ನೀವು ಗೌರವಿಸದೆ ಹೋದರೆ, ನಿಮ್ಮ ಮಕ್ಕಳು ನಿಮ್ಮನ್ನು ಕೂಡ ಗೌರವಿಸಲಾರರು. ಪತಿಯ ಮಾನ ಸಂಮಾನಗಳಲ್ಲಿಯೇ ಪತ್ನಿಯ ಮಾನ ಸಂಮಾನಗಳು ಅಡಗಿವೆ. ಇದು ನಮ್ಮ ಸಭ್ಯತೆ.**

# ಪತಿಯನ್ನ ಟೀಕಿಸದೆ ತಿದ್ದಿದರೆ ಬದಲಾವಣೆ ಸಾಧ್ಯ

ನಮ್ಮ ಭಾರತೀಯ ಸಂಪ್ರದಾಯದಲ್ಲಿ ಗಂಡನಿಗೆ ಯಜಮಾನ, ಧನಿ, ಸಾಹುಕಾರ, ಏನ್ರೀ ಎಂದೆಲ್ಲಾ ಕರೆದು ಆತನನ್ನು ಪತಿ ಪರಮೇಶ್ವರನ ಸ್ಥಾನದಲ್ಲಿ ಕೂಡಿಸಿದ್ದಾರೆ. ಇಂದಿನ ಆಧುನಿಕ ಯುಗದಲ್ಲಿಯೂ ಪತ್ನಿ ತನ್ನ ಪತಿಯನ್ನು ಹಿರಿಯರ ಮುಂದೆ ಆತನ ಹೆಸರಿನಿಂದ ಕರೆಯಲು ಹಿಂಜರಿಯುವಂತಹ ಪರಿಸ್ಥಿತಿ ಇದೆ. ಪತಿಯೇ ಪರ ದೈವ, ಪತಿ ಸೇವೆಯೇ ಪರಮ ಸೇವೆ ಪತಿವ್ರತೆಯೇ ಮನೆಯ ಲಕ್ಷಣ ಎಂಬಂತಹ ಮಾತುಗಳು ಕುಟುಂಬದಲ್ಲಿ ಗಂಡಸಿನ ಪರಮಾಧಿಕಾರವನ್ನು ಸೂಚಿಸಿದರೆ ಹೆಣ್ಣಿನ ವಿವಶತೆಯನ್ನು ತೋರುತ್ತವೆ ಎಂದು ಮೇಲ್ನೋಟಕ್ಕೆ ತೋರಿದರೂ, ವಯಸ್ಸಿನಲ್ಲಿ ತನಗಿಂತ ಹಿರಿಯನಾದ ಗಂಡನಿಗೆ ಗೌರವ ನೀಡಬೇಕಾದ್ದು ಪತ್ನಿಯ ಕರ್ತವ್ಯ.

ಬದಲಾದ ಕಾಲಘಟ್ಟದಲ್ಲಿ ಹೆಣ್ಣು ಮಕ್ಕಳು ಪುರುಷನಿಗೆ ಸರಿಸಮಾನವಾಗಿ ದುಡಿಯುತ್ತಿದ್ದು ಪುರುಷರಿಗೆ ತಾವೇನೂ ಕಮ್ಮಿ ಇಲ್ಲ ಎಂಬುದನ್ನು ನಿರೂಪಿಸುತ್ತಿದ್ದಾರೆ. ಆದರೂ ಕೂಡ ಮನೆಯ ಒಳ ಬಾಗಿಲಲ್ಲಿ ಇನ್ನೂ ಗಂಡು ಹೆಣ್ಣಿನ ನಡುವೆ ಅಸಾಧ್ಯ ತಾರತಮ್ಯಗಳು ಇವೆ. ನಾನು ಗಂಡಸು ಮನೆಯಲ್ಲಿ ಎಲ್ಲರೂ ನನ್ನ ಮಾತನ್ನು ಕೇಳಲೇಬೇಕು ಎಂಬ ಗಂಡಸಿನ ಅಹಂ ಹೆಣ್ಣಿನ ಸ್ವಾಭಿಮಾನಕ್ಕೆ ಪೆಟ್ಟನ್ನು ನೀಡುತ್ತಿದೆ. ಒಂದೆಡೆ ತನ್ನ ಶ್ರೀಯು ಕೂಡ ತನ್ನ ಆತ್ಮಾಭಿಮಾನವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಗಂಡನ ಅಹಂಗೆ ಪೆಟ್ಟು ನೀಡದೆ ಆತನನ್ನು ಸರಿಪಡಿಸಲು ಇಲ್ಲಿವೆ ಉಪಾಯಗಳು

**ಧ್ವನಿಯನ್ನು ತಗ್ಗಿಸಿ...** ಆತ ಮಗುವಿನಂತೆ ಕೆಲವೊಮ್ಮೆ ವರ್ತಿಸ ಬಹುದು ಆದರೂ ಆತ ನಿಮ್ಮ ಮಗುವಲ್ಲ... ಆತನೊಂದಿಗೆ ಮಾತನಾಡುವಾಗ ನಿಮ್ಮ ಧ್ವನಿಯನ್ನು ತುಸು ತಗ್ಗಿಸಿ. ದರ್ಪದಿಂದ ಹೇಳಿದಾಗ ತಿಳಿದುಕೊಳ್ಳದ ವ್ಯಕ್ತಿ ಮೃದುವಾದ ಮಾತಿನಲ್ಲಿ ಹೇಳಿದಾಗ ಅರಿತುಕೊಳ್ಳುವ ಸಾಧ್ಯತೆಗಳು ಬಹಳ... ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ಏಕೆ ತೆಗೆದುಕೊಳ್ಳಬೇಕು?

**ಪ್ರೀತಿಯಿಂದ ತಿದ್ದಿ...** ನಿಮ್ಮ ಪತಿಯೂ ಕೂಡ ಓರ್ವ ಮನುಷ್ಯ. ನಿಮ್ಮಿಂದ ಆಗುವಂತೆ ಆತನಿಂದಲೂ ತಪ್ಪುಗಳಾಗುತ್ತವೆ ಎಂಬುದನ್ನು ನೆನಪಿನಲ್ಲಿಡಿ. ನಿಮ್ಮ ಯಾವುದೇ ತಿದ್ದುವಿಕೆಗಳು ಕೂಡ ಪ್ರೀತಿಯಿಂದ ಆತ್ಮೀಯತೆಯಿಂದ ಕೂಡಿರಬೇಕು.

**ಟೀಕಿಸದಿರಿ...** ಪತಿಯನ್ನು ಆತನ ಕುಟುಂಬದವರ ಮುಂದೆ, ಸ್ನೇಹಿತರು ಮತ್ತು ಸಂಬಂಧಿಗಳ ಮುಂದೆ ಟೀಕಿಸದಿರಿ. ಅದೆಷ್ಟೇ ನೀವು ಸರಿ ಇದ್ದಾಗಲೂ ಕೂಡ ಆತ ಗಂಡಸು ಎಂಬ ಅಹಮಿಕೆ ಯನ್ನು ಆತನಿಗೆ ಹೊರಿಸಿರು ವಾಗ ನಿಮ್ಮ ಟೀಕಿಸುವಿ ಕೆಯನ್ನು ತಪ್ಪು ತಿಳಿದು ಕೊಳ್ಳುವ ಕುಟುಂಬ ದವರು ಆತ ಇನ್ನೆಂದೂ ನಿಮ್ಮ ಮಾತು ಕೇಳದಂತೆ ಆತನನ್ನು ತಮಾಷೆಗೀಡು ಮಾಡ ಬಹುದು ಇಲ್ಲವೇ ಕಲಿಸಿ ಕೊಡಬಹುದು. ನಿಮ್ಮ ಟೀಕೆಗಳು ರಚನಾತ್ಮಕ ವಾಗಿದ್ದು ಗಂಡಸಿನ ಆತ್ಮ ಗೌರವಕ್ಕೆ ಪೆಟ್ಟು ಬೀಳದಂತೆ ಆತನ ಬದಲಾವಣೆಗೆ ಕಾರಣವಾಗುವಂತಿರಬೇಕು. ತಿದ್ದುವಿಕೆ ಮತ್ತು ಟೀಕಿಸುವಿಕೆ ಎರಡು ವಿಭಿನ್ನ ಚಟುವಟಿಕೆ ಗಳು ಎಂಬುದು ನೆನಪಿನಲ್ಲಿರ ಬೇಕು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

**ನನ್ನ ಪತ್ನಿ ಹೇಳಿದಂತೆ....** ಮನೆಯಲ್ಲಿ ಎಲ್ಲವೂ ನನ್ನ ಪತ್ನಿ ಹೇಳಿದಂತೆ ನಡೆಯುತ್ತದೆ ಎಂಬ ಭಾವ ಆತನಲ್ಲಿ ತಲೆದೋರದಂತಿರಬೇಕು. ನೀನು ಆತನ



ಯಜಮಾನಿಯಲ್ಲ, ಹಾಗೆಯೇ ಆತನೂ ಕೂಡ ನಿನ್ನ ಯಜಮಾನನಲ್ಲ. ಕುಟುಂಬದ ಮತ್ತು ಮನೆಯ ವಿಷಯದಲ್ಲಿ ನೀವಿಬ್ಬರೂ ತೆಗೆದುಕೊಳ್ಳುವ ನಿರ್ಧಾರಗಳು ಪರಸ್ಪರ ಚರ್ಚಿಸಿ, ಸಾಧಕ ಬಾಧಕಗಳನ್ನು ಗುರುತಿಸಿ ಅಳವಡಿಸಿಕೊಳ್ಳುವಂತಿರಬೇಕು.

ಅಡುಗೆಗೆ ಆತ ಹೆಸರಿಡುತ್ತಾನೆ ಎಂಬ ಕಾರಣಕ್ಕೆ ಅಡುಗೆ ಮಾಡುವುದರಲ್ಲಿ ನಿರಾಸಕ್ತಿ ತೋರುವುದರ ಬದಲು ಇನ್ನಷ್ಟು ಹೆಚ್ಚು ಕ್ರಿಯಾತ್ಮಕವಾಗಿ ಅಡುಗೆಯ ಕೌಶಲ್ಯವನ್ನು ಹೊಂದುವುದು ಪತ್ನಿಗೆ ಒಳ್ಳೆಯ ಅವಕಾಶವಾದರೆ, ತನ್ನ ಪತ್ನಿ ಹೇಳುವ ವಿಷಯಗಳಲ್ಲಿ ತಿರುಳಿದೆ ಎಂಬುದನ್ನು ಅರಿಯುವ ಗಂಡಸು ತನ್ನನ್ನು ತಾನು ಸೂಕ್ಷ್ಮವಾಗಿ ತಿದ್ದಿಕೊಳ್ಳುವ ಮೂಲಕ ಪರಸ್ಪರರ ಭಾವನೆ ಗಳನ್ನು ಗೌರವಿಸಬೇಕು.

**ಮುಕ್ತವಾದ ಪ್ರಶಂಸೆ...** ಸಾಧಾರಣವಾಗಿ ಹೆಣ್ಣು ಮಕ್ಕಳು ತಮ್ಮ ಪತಿಯ ಒಳ್ಳೆಯ ಗುಣಗಳನ್ನು ಬೇರೆ ಯವರ ಮುಂದೆ ಹೇಳಿಯೇ ಹೇಳುತ್ತಾರೆ, ಆದರೆ ತಮ್ಮ ಪತಿಯ ಒಳ್ಳೆಯ ಕೆಲಸಗಳ, ಸಾಧನೆಗಳ ಕುರಿತು ಆತನನ್ನು ಪ್ರಶಂಸಿಸಿ ಮಾತನಾಡು ವುದಿಲ್ಲ. ಯಾವ ರೀತಿ ನೀವು ನಿಮ್ಮ ಪತಿಯ ಪ್ರಶಂಸೆಯ ಮಾತುಗಳನ್ನು ಕೇಳಬೇಕೆಂದು ಆಶಿಸುವಿರೋ ಅಂತೆಯೇ ಆತನಿಗೂ ಕೂಡ ತನ್ನ ಸಂಗಾತಿಯ ಗುರುತಿಸುವಿಕೆ ಮತ್ತು ಪ್ರಶಂಸೆಯ ಅಗತ್ಯ ಇದೆ ಎಂಬುದನ್ನು ಅರಿತು ಸೂಕ್ತ ಮತ್ತು ಧನಾತ್ಮಕ ಪ್ರಶಂಸೆ ಮಾಡಿ. ಪತ್ನಿಯ ಪ್ರಶಂಸೆ ಆತನಲ್ಲಿ ಮತ್ತಷ್ಟು ಒಳ್ಳೆಯ ಸಾಧನೆಗಳನ್ನು ಮಾಡಲು ಸ್ಪೂರ್ತಿಯನ್ನು ನೀಡುತ್ತದೆ.

**ನಿಮ್ಮ ಮಕ್ಕಳ ಸಮ್ಮುಖದಲ್ಲಿ ಪತಿಯನ್ನು ತಿದ್ದದಿರಿ ...**

ನಿಮ್ಮ ಮಕ್ಕಳ ಮುಂದೆ ಪತಿಯನ್ನು ತಿದ್ದುವ ಸಾಹಸಕ್ಕೆ ಎಂದೂ ಕೈ ಹಾಕಬೇಡಿ, ಹೀಗೆ ಮಾಡುವುದರಿಂದ ಮಕ್ಕಳಿಗೆ ತಮ್ಮ ತಂದೆಯ ಮೇಲಿನ ಗೌರವ ಕಡಿಮೆಯಾಗುತ್ತದೆ. ಆತ ನಿಮಗೆ ಸಂಗಾತಿಯಾಗಿರ ಬಹುದು ಆದರೆ ಕುಟುಂಬದ ಯಜಮಾನನಾಗಿ ಆತನ ಗೌರವ ಎಂದೂ ಕಡಿಮೆಯಾಗಬಾರದು.

**ಸಾರ್ವಜನಿಕವಾಗಿ ಪತಿಯನ್ನು ತಿದ್ದುವ ಸಾಹಸಕ್ಕೆ ಕೈ ಹಾಕದಿರಿ...** ಹಾಗೆ ಮಾಡುವುದರಿಂದ ನಿಮ್ಮ ವರ್ಚಸ್ಸು ಹೆಚ್ಚಾಗುವುದಿಲ್ಲ ಆದರೆ ಆತನ ಆತ್ಮ ಗೌರವಕ್ಕೆ ಇನ್ನಿಲ್ಲದಂತ ಪೆಟ್ಟು ಬೀಳುತ್ತದೆ. ಆತನ ಗೌರವಕ್ಕೆ ಚ್ಯುತಿ ತರುವ ನೀವು ಕೂಡ ಸಮಾಜದ ಕಣ್ಣಿನಲ್ಲಿ ಗೌರವವನ್ನು ಕಳೆದುಕೊಳ್ಳುತ್ತೀರಿ.

**ಸಿಟ್ಟಿನಿಂದ ತಿದ್ದಲು ಸಾಧ್ಯವಿಲ್ಲ...** ಕೋಪ ಮಾಡಿಕೊಂಡು, ಜೋರಾಗಿ ಕೂಗಾಡಿ, ತೊಂದರೆ ಮಾಡುವ ಮೂಲಕ ನೀವು ಎಂದೂ ನಿಮ್ಮ ಪತಿಯನ್ನು ತಿದ್ದಲು ಸಾಧ್ಯವಿಲ್ಲ ಎಂಬ ಸತ್ಯದ ಮತ್ತು ಅರಿವು ನಿಮಗಿರಲಿ. ತಾಳ್ಮೆ ಕಳೆದುಕೊಂಡು ಆತ ನಿಮ್ಮೊಂದಿಗೆ ಜಗಳಕ್ಕಿಳಿಯುವಂತೆ ಮಾಡಬೇಡಿ... ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಡುವುದೂ ಉರಿಯುತ್ತಿರುವ ಮನೆಗೆ ಸೀಮೆಎಣ್ಣೆ ಎರಚುವುದೂ.... ಎರಡೂ ಒಂದೇ. ಬದಲಾಗಿ ನೀವಿದ್ದರೆ ಏಕಾಂತದಲ್ಲಿ ಕುಳಿತು ಇಲ್ಲವೇ ಒಂದು ಸುದೀರ್ಘ ನಡಿಗೆಗೆ ಹೋಗಿ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಿ.

**ಎಂದೆಂದಿಗೂ ನಿಮ್ಮ ಪತಿಯನ್ನು ಬೇರೆಯ ಗಂಡಸರೊಂದಿಗೆ ಹೋಲಿಸದಿರಿ...** ಅಸೂಯೆಗೆ ಕಾರಣವೇ ಪರಪುರುಷರೊಂದಿಗೆ ನಿಮ್ಮ ಪತಿಯನ್ನು ಹೋಲಿಸುವುದು. ಯಾವುದೇ ವ್ಯಕ್ತಿಯು ತನ್ನ ಪತ್ನಿಯ ಕಣ್ಣಲ್ಲಿ ಕಡೆಗಣಿಸಲ್ಪಡುವುದನ್ನು ಸಹಿಸುವುದಿಲ್ಲ. ತನ್ನ ಪತ್ನಿಯ ಕಣ್ಣಲ್ಲಿ ತಾನೇ ಹೀರೋ ಆಗಿರಬೇಕು ಎಂಬ ಆತನ ಬಯಕೆ ಸಹಜ ಮತ್ತು ಸಾಧುವಾದದ್ದು ಕೂಡ. ಆತನಿಗೆ ಈ ವಿಷಯದಲ್ಲಿ ನಿರಾಶೆ ಸಲ್ಲದು.

**ಹಳೆಯ ಕಹಿ ಘಟನೆಗಳನ್ನು ಮತ್ತೆ ನೆನಪಿಸಬೇಡಿ...** ನಡೆದು ಹೋದ ಕೆಟ್ಟ ಘಟನೆಗಳನ್ನು ನೆನಪಿಸಿ ಮನಸ್ಸನ್ನು ಕಹಿ ಮಾಡಿಕೊಂಡು ಕೂಗಾಡುವುದರಿಂದ ಈಗಾಗಲೇ ಸಮಾಧಿಯಲ್ಲಿ ಹೂತಿಟ್ಟಿರುವ ಶವವನ್ನು ಹೊರ ತೆಗೆಯುವದರಿಂದ ಯಾವುದೇ ಪ್ರಯೋಜನ ಇಲ್ಲ ಎಂಬಷ್ಟೇ ಸತ್ಯವಾದದ್ದು ಎಂಬ ತಿಳುವಳಿಕೆಯುಳ್ಳ ಹೆಣ್ಣು ಮಗಳು ನೀವಾಗಿರಿ. ಪ್ರಸ್ತುತ ತೊಂದರೆಯ ಕುರಿತು ಪ್ರಬುದ್ಧವಾಗಿ ಚರ್ಚಿಸಿ ಪರಿಹಾರಾತ್ಮಕ ತೀರ್ಮಾನಗಳನ್ನು ಕೈಗೊಳ್ಳಿ.

**ಪತಿಯ ಗಂಡಸುತನಕ್ಕೆ ಸವಾಲು ಹಾಕಬೇಡಿ....** ತಮಗೆ ತಾವು ಬದಲಾಗಬೇಕೆಂದು ಗಂಡ ಖುದ್ದು ಬದಲಾಗಬೇಕೆಂದು ಬಯಸದ ಹೊರತು, ಯಾವ ಪತ್ನಿಗೂ ಆತನನ್ನು ಬದಲಿಸಲು ಸಾಧ್ಯವಿಲ್ಲ. ಆತನ ಗಂಡಸುತನಕ್ಕೆ ಸವಾಲು ಹಾಕಿ ಆತನನ್ನು ಬದಲಿಸುತ್ತೇವೆ ಎಂದರೆ ಅದು ಮೂರ್ಖತನವೇ ಸರಿ.

**ಪತಿಯ ಗೌರವಕ್ಕೆ ಚ್ಯುತಿ ತರಬೇಡಿ...** ನಿಮ್ಮ ಪತಿಗೆ ಗೌರವ ನೀಡುವ ಮೂಲಕ ನಿಮ್ಮ ಮಕ್ಕಳ ಗೌರವಕ್ಕೆ ಪಾತ್ರರಾಗಿ. ನಿಮ್ಮ ಪತಿಯನ್ನು ನೀವು ಗೌರವಿಸದೆ ಹೋದರೆ ನಿಮ್ಮ ಮಕ್ಕಳು ನಿಮ್ಮನ್ನು ಕೂಡ ಗೌರವಿಸಲಾರರು. ಪತಿಯ ಮಾನ ಸಂಮಾನಗಳಲ್ಲಿಯೇ ಪತ್ನಿಯ ಮಾನ ಸಂಮಾನಗಳು ಅಡಗಿವೆ. ಇದು ನಮ್ಮ ಸಭ್ಯತೆ.

**ಶಾಂತ ಸ್ಥಿತಿಯಲ್ಲಿ ನಿಭಾಯಿಸಿ...** ಸಿಟ್ಟಿನ ತುತ್ತ ತುದಿಯಲ್ಲಿರುವಾಗ, ಅಪನಂಬಿಕೆ, ಸಂಶಯಗಳು ಅಲ್ಲೋಲ್ಲ ಕಲ್ಲೋಲ್ಲ ಮಾಡಿದಾಗ ಪತಿಯನ್ನು ತಿದ್ದಲು ಹೋಗಬೇಡಿ.... ಅದೆಂದೂ. ಪರಿಣಾಮಕಾರಿಯಾದ ಫಲಿತಾಂಶವನ್ನು ನೀಡುವುದಿಲ್ಲ. ಸೂಕ್ತ ಸಮಯದಲ್ಲಿ ಇನಿತಾದ ದನಿಯಲ್ಲಿ ಹೇಳಿದಾಗ ಮಾತ್ರ ಅವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಇನ್ನೊಂದು ವಿಷಯ ಹೇಳಿದರೆ ನಿನಗೆ ಆಶ್ಚರ್ಯವಾಗ ಬಹುದು... ಗಂಡಸರು ತಮಗೆ ಬೇಕೆನಿಸಿದ ವಿಷಯಗಳನ್ನು ಮಾತ್ರ ಸ್ಮರಣೆಯಲ್ಲಿ ಇಟ್ಟುಕೊಳ್ಳುತ್ತಾರೆ... ಉಳಿದುದು ನೀನೇನೆ ಬೊಂಬಡಾ ಹೊಡೆದರೂ ಅವರಿಗೆ ಕೇಳುವುದಿಲ್ಲ.

ಮನೆಯಲ್ಲಿ ನಿಮ್ಮ ಪತಿ ಯಾವುದಾದರೂ ಕೆಲಸದಲ್ಲಿ ತೊಡಗಿದಾಗ ಅವರಿಗೆ ಬೇಕಾದ ಸಾಮಾನುಗಳನ್ನು ನೀವು ಕೂಡ ಅವರೊಂದಿಗೆ ಕೈಜೋಡಿಸಿ... ನಿಮ್ಮ ಸಹಾಯ ಹಸ್ತವನ್ನು ಚಾಚಿ. ನಿಮ್ಮ ಚಿಕ್ಕ ಪುಟ್ಟ ಸಹಾಯಗಳು ಅವರಿಗೆ ತಮ್ಮ ಕೆಲಸವನ್ನು ಶೀಘ್ರವಾಗಿ ಮುಗಿಸಲು ಅನುಕೂಲವಾಗುತ್ತದೆ. ತನ್ನ ಪತಿಯನ್ನು ಗೌರವಿಸುವ ಹೆಣ್ಣುಮಗಳು ನಿಜವಾಗಿಯೂ ಶಕ್ತಿಶಾಲಿಯಾಗಿರುತ್ತಾಳೆ. ನಿಮ್ಮ ಗಂಡನ ಹೃದಯ ಸಿಂಹಾಸನದಲ್ಲಿ ನೀವು ರಾಣಿಯಂತೆ ರಾರಾಜಿಸಬೇಕೆಂದು ಬಯಸುವುದಾದರೆ ನಿಮ್ಮ ಪತಿಯನ್ನು ಮಹಾರಾಜನಂತೆ ಗೌರವಿಸಿ. ಗೌರವ ಎಂಬುದು ಕೊಟ್ಟು ಪಡೆದು ಕೊಳ್ಳಬಹುದಾದ ಒಂದು ಸಂವೇದನೆ.

ಅಂತಿಮವಾಗಿ ಯುದ್ಧಗಳನ್ನು ಗೆಲ್ಲಲು ಬೇಕಾಗಿರುವುದು ನಿಮ್ಮ ಶಸ್ತ್ರ ಕೌಶಲ ಒಂದೇ ಅಲ್ಲ... ನಿಮ್ಮ ಪ್ರೀತಿಯ ಮಾತು, ಅಕ್ಕರೆಯ ಊಟ ಉಪಚಾರ, ಗೌರವದ ನಡವಳಿಕೆ ಮತ್ತು ಆದರಿಸುವ ಗುಣದಿಂದಲೂ ಕೂಡ ಪತಿಯನ್ನು ಗೆಲ್ಲಬಹುದು.

ಏನಂತೀರಾ ಸ್ನೇಹಿತರೆ ?

---

# ವಿಜ್ಞಾನ ಕ್ಷೇತ್ರವನ್ನು ಬೆಳಗುತ್ತಿರುವ ಮಹಿಳಾ ಶಕ್ತಿ

**ರಾಜು.ಭೂಶೆಟ್ಟಿ, ಹುಬ್ಬಳ್ಳಿ**



ವಿಜ್ಞಾನದಲ್ಲಿ ಮಹಿಳೆಯರ ಮತ್ತು ಬಾಲಕಿಯರ ಗಮನಾರ್ಹ ಸಾಧನೆಗಳನ್ನು ಗೌರವಿಸಲು ಮತ್ತು ವಿಜ್ಞಾನ–ತಂತ್ರಜ್ಞಾನ, ಎಂಜಿನಿಯರಿಂಗ್–ಗಣಿತ ವಿಷಯಗಳಲ್ಲಿ ಆಸಕ್ತಿ ಇರುವವರನ್ನು ಆ ಕ್ಷೇತ್ರದಲ್ಲಿ ಉನ್ನತ ಸಾಧನೆಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿ ವರ್ಷ ಫೆಬ್ರವರಿ 11 ರಂದು ಜಗತ್ತಿನಾದ್ಯಂತ ವಿಜ್ಞಾನದಲ್ಲಿ ಮಹಿಳಾ ಮತ್ತು ಬಾಲಕಿಯರ ಅಂತಾರಾಷ್ಟ್ರೀಯ ದಿನವನ್ನಾಗಿ ಆಚರಿಸಲಾಗುತ್ತದೆ. ಇಡೀ ವಿಶ್ವವು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಬೇಕೆಂದರೆ ಲಿಂಗ ಸಮಾನತೆಯತ್ತ ಒತ್ತು ಕೊಡುವುದರ ಜೊತೆಗೆ ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರು ಮತ್ತು ಬಾಲಕಿಯರನ್ನು ಒಳಗೊಳ್ಳುವ ಯೋಜನೆಗಳನ್ನು ರೂಪಿಸಿ, ಅದನ್ನು ಕಾರ್ಯಗತಗೊಳಿಸಲು ಶ್ರಮಿಸಬೇಕಿದೆ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬುದು ಎಷ್ಟು ಸತ್ಯವೋ, ಮಹಿಳೆಯೊಬ್ಬಳು ವಿಜ್ಞಾನದಲ್ಲಿ ತನ್ನನ್ನು ತೊಡಗಿಸಿಕೊಂಡರೆ ಪ್ರಯೋಗಾಲಯವೊಂದು ತೆರೆದಂತೆ ಎಂಬುದು ಕೂಡ ಅಷ್ಟೇ ಕಟು ಸತ್ಯವಾದ ಮಾತು. ಆ ಒಂದು ಪ್ರಯೋಗಾಲಯವು ಸಾವಿರಾರು ಮಹಿಳೆಯರು ವಿಜ್ಞಾನದಲ್ಲಿ ಆಸಕ್ತಿ ಹೊಂದಲು ಹಾಗೂ ಸಂಶೋಧನೆ ಕೈಗೊಳ್ಳಲು ಸ್ಪೂರ್ತಿ ನೀಡುವುದರ ಮೂಲಕ ಮಹಿಳಾ ವಿಜ್ಞಾನಿಗಳ ಅದ್ಭುತವಾದ ಲೋಕವನ್ನೇ ಸೃಷ್ಟಿಸಿದಂತಾಗುವುದು. ಇಪ್ಪತ್ತೊಂದನೇ ಶತಮಾನದ ಅಗಾಧವಾದ ಸವಾಲುಗಳನ್ನು ಎದುರಿಸುವುದು ಸಾಧ್ಯವಾಗ ಬೇಕಾದರೆ ಅದು ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯಿಂದ ಮಾತ್ರ ಸಾಧ್ಯ. ವಿಶ್ವಕ್ಕೆ ವಿಜ್ಞಾನ ವೆಂಬುದು ಎಷ್ಟು ಅಗತ್ಯವೋ, ಅಷ್ಟೇ ಅಗತ್ಯ ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರನ್ನು ವ್ಯಾಪಕವಾಗಿ ತೊಡಗಿಸಿ ಕೊಳ್ಳುವುದು. ವಿಶ್ವವನ್ನು ಕಾಡುತ್ತಿರುವ ಹಲವಾರು ಜ್ವಲಂತ ಸಮಸ್ಯೆಗಳಿಗೆ ಮಹಿಳೆಯರನ್ನು ವಿಜ್ಞಾನದಲ್ಲಿ ತೊಡಗಿಸಿ ಕೊಳ್ಳುವುದರ ಮೂಲಕ ಪರಿಹಾರ ಕಂಡುಹಿಡಿಯ ಬಹುದಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಪ್ರತಿಭಾವಂತ ಮಹಿಳೆಯರಿದ್ದರೂ ಕೂಡ ಅವರಿಗೆ ಕೆಲವು ಮೂಲಭೂತ ಸೌಕರ್ಯಗಳ ಕೊರತೆಗಳಿಂದಾಗಿ, ವಿಜ್ಞಾನ ಕಲಿಯಬೇಕೆಂದರೆ ದೂರದ ನಗರ ಪ್ರದೇಶಗಳಿಗೆ ಹೋಗಬೇಕೆಂಬ ಅನಿವಾರ್ಯತೆಗಳಿಂದಾಗಿ ಅವರು ವಿಜ್ಞಾನ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಇನ್ನೂ ಕೆಲವು ಕಾರಣಗಳನ್ನು ನೋಡಲಾಗಿ ವಿಜ್ಞಾನ ಸಂಶೋಧನೆಗಳು ದೀರ್ಘಕಾಲದವುಗಳು ಎಂಬ ತಪ್ಪು ಕಲ್ಪನೆಗಳಿಂದ, ಕುಟುಂಬ ನಿರ್ವಹಣೆಯ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಮಹಿಳೆಯರ ಹೆಗಲ ಮೇಲೆ ಹೇರುವುದರಿಂದ ಅವರು ಸಂಶೋಧನೆಗಳಿಂದ ವಿಮುಖರಾಗುತ್ತಿರುವುದು ಕೂಡ ನೋವಿನ ಸಂಗತಿ. ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಯೆಂದರೆ ಅದು ಕೇವಲ ಆಧುನಿಕ ಉಪಕರಣಗಳ ಬಳಕೆಯಷ್ಟೇ ಅಲ್ಲ. ಮಹಿಳೆಯರಿಗೂ ಪುರುಷರಿಗೆ ಸರಿ ಸಮನಾಗಿ ವಿಜ್ಞಾನ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಂಪೂರ್ಣವಾಗಿ ಮುಕ್ತ ಅವಕಾಶಗಳನ್ನು ಒದಗಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವೆಂಬುದನ್ನು ಅರ್ಥೈಸಿಕೊಂಡು ಆ ನಿಟ್ಟಿನಲ್ಲಿ ಪ್ರಾಮಾಣಿಕವಾದ ಕೆಲಸಗಳಾದಾಗ ಮಾತ್ರ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನಿಜವಾದ ಅಭಿವೃದ್ಧಿ ಎಂಬುದನ್ನು ಒಪ್ಪಿಕೊಳ್ಳಬಹುದಾಗಿದೆ.

ಮುಂಬರುವ ದಿನಗಳಲ್ಲಿ ಶೇ. 90 ರಷ್ಟು ಉದ್ಯೋಗವಕಾಶಗಳು ವಿಜ್ಞಾನ ಮತ್ತು ತಂತ್ರಜ್ಞಾನದಿಂದ ದೊರೆಯುವ ಸಾಧ್ಯತೆಗಳಿರುವುದರಿಂದ ಮಹಿಳೆಯರಿಗೆ ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಅವರಿಗೆ ಅಗತ್ಯವಿರುವ ಕೌಶಲಗಳನ್ನು ಒದಗಿಸಲು ಕಾರ್ಯಯೋಜನೆಗಳನ್ನು ಸಿದ್ಧಪಡಿಸಬೇಕಾಗಿದೆ. ಮೇರಿ ಕ್ಯೂರಿಯವರು ನೊಬೆಲ್ ಪ್ರಶಸ್ತಿಯನ್ನು ಪಡೆದ ಮೊದಲ ಮಹಿಳೆಯಾಗಿದ್ದಾರೆ. ಎಲಿಜಬೆತ್ ಬ್ರಾಗ್ ಅವರು ಎಂಜಿನಿಯರಿಂಗ್ ಪದವಿ ಪಡೆದ ಮೊದಲ ಮಹಿಳೆ. ಅವರು ಬರ್ಕ್ಲಿಯಲ್ಲಿರುವ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಪದವಿ ಪಡೆದರು. ಕ್ಯಾಥರೀನ್ ಜಾನ್ಸನ್ ನಾಸಾಗೆ ಆರ್ಬಿಟಲ್ ಮೆಕ್ಯಾನಿಕ್ಸ ಅನ್ನು ಲೆಕ್ಕಾಚಾರ ಮಾಡುವ ಗಣಿತಜ್ಞೆಯಾಗಿದ್ದರು. ಲಿಲಿಯನ್ ಗಿಲ್ಬ್ರೆತ್ ಇವರು ಮೊದಲ ಕೈಗಾರಿಕಾ/ಸಾಂಸ್ಥಿಕ ಮನಶಾಸ್ತ್ರಜ್ಞೆ ಮತ್ತು ಅಮೆರಿಕದ ಮೊದಲ ಎಂಜಿನಿಯರಿಂಗ್ ಮಹಿಳೆ. ಪಿ.ಹೆಚ್.ಡಿ ಗಳಿಸಿದ ಮೊದಲ ಅಮೆರಿಕನ್ ಮಹಿಳಾ ಎಂಜಿನಿಯರ್‌ಗಳಲ್ಲಿ ಒಬ್ಬರು. ಪರ್ಡ್ಯೂ ವಿಶ್ವವಿದ್ಯಾಲಯದ ಮೊದಲ ಮಹಿಳಾ ಎಂಜಿನಿಯರಿಂಗ್ ಪ್ರಾಧ್ಯಾಪಕಿಯಾಗಿದ್ದಾರೆ. ರುತ್ ಬೆನೆರಿಟೊ ಇವರು ಒಬ್ಬ ಅಮೆರಿಕನ್ ರಸಾಯನಶಾಸ್ತ್ರಜ್ಞೆ, ಒಟ್ಟು 55 ಪೇಟೆಂಟ್‌ಗಳನ್ನು ಹೊಂದಿರುವ ಸಂಶೋಧಕಿಯೂ ಹೌದು. ಎಡಿತ್ ಕ್ಲಾರ್ಕ ಇವರು ಎಲೆಕ್ಟ್ರಿಕ್ ಎಂಜಿನಿಯರ್ ಆಗಿ ವೃತ್ತಿಪರ ಉದ್ಯೋಗಿಯಾದ ಮೊದಲ ಅಮೆರಿಕನ್ ಮಹಿಳೆ ಮತ್ತು ಅಮೆರಿಕದ ಮೊದಲ ಮಹಿಳಾ ಎಲೆಕ್ಟ್ರಿಕ್ ಎಂಜಿನಿಯರಿಂಗ್ ಪ್ರಾಧ್ಯಾಪಕರಾದರು.

ಈ ದಿನವನ್ನು ಹೇಗೆ ಆಚರಿಸಬಹುದು?

ವಿಜ್ಞಾನಕ್ಕೆ ಮಹಿಳೆಯರ ಕೊಡುಗೆಗಳನ್ನು ತಿಳಿದುಕೊಳ್ಳುವುದು– ಜೀವನದುದ್ದಕ್ಕೂ ಹಲವಾರು ರೀತಿಯ ಹೋರಾಟಗಳನ್ನು ನಡೆಸಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಸಂಶೋಧನೆಗಳ ಮೂಲಕ ಗುರುತಿಸಿಕೊಂಡಿರುವ ಮಹಿಳೆಯರ ಕೊಡುಗೆಗಳನ್ನು ಸ್ಮರಿಸುವುದು ಹಾಗೂ ಅವುಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಸಾಮಾಜಿಕ ಮಾಧ್ಯಮದ ಮೂಲಕ ಹಂಚಿಕೊಳ್ಳುವುದು. ತನ್ನ ಶೈಕ್ಷಣಿಕ ಉತ್ಸಾಹವನ್ನು ಹುಡುಕಲು ಬಾಲಕಿಯರನ್ನು ಪ್ರೋತ್ಸಾಹಿಸುವುದು– ಬಾಲಕಿಯರಿಗೆ ವಿಜ್ಞಾನ–ತಂತ್ರಜ್ಞಾನ, ಎಂಜಿನಿಯರಿಂಗ್– ಗಣಿತದಲ್ಲಿ ಅವರ ಆಸಕ್ತಿಯನ್ನು ಗುರುತಿಸಿ, ಅವರಿಗೆ ಆ ಕ್ಷೇತ್ರದಲ್ಲಿ ಉನ್ನತವಾದ ಸಾಧನೆಗೈಯಲು ಪ್ರೋತ್ಸಾಹಿಸುವುದು ಕೂಡ ತುಂಬಾ ಮಹತ್ವದ್ದು. ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾದರೆ ಜಗತ್ತಿನಲ್ಲಿ ಆಗಬಹುದಾದ ಮಹತ್ತರ ಬದಲಾವಣೆಗಳ ಕುರಿತು ಯೋಚಿಸುವುದು.

ವಿಜ್ಞಾನದಲ್ಲಿ ಮಹಿಳಾ ಮತ್ತು ಬಾಲಕಿಯರ ಅಂತಾರಾಷ್ಟ್ರೀಯ ದಿನ ಏಕೆ ಮುಖ್ಯವಾಗಿದೆ?

ವಿಜ್ಞಾನದಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸುವ ಜಾಗತಿಕ ಉಪಕ್ರಮವಾಗಿದೆ. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಬಾಲಕಿಯರಿಗೆ ಅವರ ಚಿಕ್ಕ ವಯಸ್ಸಿನಲ್ಲಿಯೇ ವಿಜ್ಞಾನ–ತಂತ್ರಜ್ಞಾನ, ಎಂಜಿನಿಯರಿಂಗ್–ಗಣಿತ ವಿಷಯಗಳಲ್ಲಿ ಆಸಕ್ತಿಯನ್ನು ಗುರುತಿಸಲು, ಅಭಿವೃದ್ಧಿಪಡಿಸಲು ಕೂಡ ಜಾಗೃತಿಯನ್ನು ಮೂಡಿಸುತ್ತದೆ. ಅಂತಾರಾಷ್ಟ್ರೀಯ ವಿಜ್ಞಾನ ಸಮುದಾಯದೊಳಗೆ ಬೆಳೆಯಲು ಅವಕಾಶ ಕಲ್ಪಿಸಿಕೊಡುವುದು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಅಸಾಧ್ಯವಾದುದನ್ನು ಸಾಧಿಸಿದ ರೈತ

ಸಾವಯವ ಪದ್ಧತಿಯಲ್ಲಿ ಸಮೃದ್ಧ ಅಡಿಕೆ ಮತ್ತು ಬಾಳೆ....

'ಅಯ್ಯೋ ನಮ್ ನೆಲದಲ್ಲಿ ಅಡಿಕೆ, ಬಾಳೆ ಬೆಳೆಗಳು ಬರ್ತವೇನೋ ಮಾರಾಯ' ಅಂತ ಮೂದಲಿಸಿದವರೇ ಬಾಯಿ ಮೇಲೆ ಬೆರಳಿಟ್ಟು ನೋಡುವಂತೆ ಅಡಿಕೆಯನ್ನು ಮತ್ತು ಮಿಶ್ರಬೆಳೆಯಾಗಿ ಬಾಳೆಯನ್ನು ವಿಶೇಷವಾಗಿ ಸಂಪೂರ್ಣ ಸಾವಯವ ವಿಧಾನದಲ್ಲಿ ಬೆಳೆದು ಮಾದರಿ ರೈತರೆನಿಸಿಕೊಂಡಿದ್ದಾರೆ ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಗೆದ್ದಲಗಟ್ಟೆ ಗ್ರಾಮದ ಎನ್ ಶಿವನಾಗಪ್ಪ ಇವರು.

**ಸಾಂಪ್ರದಾಯಿಕ ಬೆಳೆಗಳಿಂದ ತೋಟಗಾರಿಕಾ ಬೆಳೆಗಳತ್ತ:**

ಕೊಳವೆಬಾವಿ ಕೊರೆಸಿದ ನಂತರ, ಇರುವ ಒಂದು ಕಾಲು ಎಕರೆ ಹೊಲದಲ್ಲಿ ಮೂರು-ನಾಲ್ಕು ವರ್ಷಗಳ ಕಾಲ ಸಾಂಪ್ರದಾಯಿಕ ಬೆಳೆಗಳಾದ ಮೆಕ್ಕೆಜೋಳ,ಜೋಳ,ರಾಗಿ, ಶೇಂಗಾ ಇತ್ಯಾದಿಗಳನ್ನು ಬೆಳೆದರೂ ಲಾಭ ಅಷ್ಟಕ್ಕಷ್ಟೇ ಅನಿಸತೊಡಗಿತು.ಇದರಿಂದ ಹೊರಬಂದು ಬೇರೆ ಲಾಭದಾಯಕ ಬೆಳೆಗಳನ್ನು ಬೆಳೆಯಬೇಕೆಂದು ಯೋಚಿಸುತ್ತಿರುವಾಗಲೇ, ಇವರಿಗೆ ಸ್ಫೂರ್ತಿಯನ್ನು ತುಂಬಿದವರು ಇವರ ದಾವಣಗೆರೆ ಜಿಲ್ಲೆಯ ಕಿತ್ತೂರಿನ ಬೀಗರಂತೆ. ಅವರು ಒಮ್ಮೆ ಇವರ ಹೊಲಕ್ಕೆ ಬಂದಿದ್ದಾಗ 'ನೀವು ಯಾಕೆ ತೋಟಗಾರಿಕೆ ಬೆಳೆಗಳಾದ ಅಡಿಕೆಯನ್ನು ಮತ್ತು ಅದು ಫಲಕ್ಕೆ ಬರುವವರೆಗೂ ಮಿಶ್ರಬೆಳೆಯಾಗಿ ಬಾಳೆಯನ್ನು ಬೆಳೆಯಬಾರದೆಂದಾಗ' ಒಂದು ಪ್ರಯತ್ನ ಮಾಡೇ ಬಿಡುವ ಅಂದುಕೊಂಡು ಮುಂದಾದಾಗ ಆದದ್ದೇ ಈ ಪವಾಡ ಎನ್ನುತ್ತಾರೆ ಶಿವನಾಗಪ್ಪ ಇವರು.

**ಕರಲುಮಿಶ್ರಿತ ಮಸಾರಿಮಣ್ಣನ್ನು ಫಲವತ್ತಾದ ಮಣ್ಣಾಗಿಸಿದ್ದು:**

ಕರಲು ಮಿಶ್ರಿತ ಮಸಾರಿ ಮಣ್ಣನ್ನು ಫಲವತ್ತಾಗಿಸಲು ಕೊಟ್ಟಿಗೆ ಗೊಬ್ಬರ, ಸರಬೂ, ಕೆರೆ ಮಣ್ಣು ಮತ್ತು ಕೆಂಪು ಮಣ್ಣನ್ನು ಏರಿಸಿ ಸಮೃದ್ಧವಾದ ನೆಲವನ್ನಾಗಿ ಪರಿವರ್ತಿಸಲು ಆರಂಭದಲ್ಲಿ ಸ್ವಲ್ಪಮಟ್ಟಿಗೆ ಕಷ್ಟ ಪಡಬೇಕಾ ಯಿತು. ಆದರೆ ಮನಸ್ಸಿದ್ದರೆ ಮಾರ್ಗ ಎಂದರಿತು ಕಷ್ಟಪಟ್ಟು ಅದನ್ನು ಸಾಧಿಸಿಯೇ ಬಿಟ್ಟರು. ಹದವಾದ ಭೂಮಿಯನ್ನು ಸಿದ್ಧ ಮಾಡಿದರು.

ಸಾವಯವ ಪದ್ಧತಿಯಲ್ಲೇ ಬೆಳೆಯಬೇಕೆಂಬ ಸಂಕಲ್ಪ:

ಪಿಯುಸಿವರೆಗೂ ವಿದ್ಯಾಭ್ಯಾಸ ಮಾಡಿರುವ ಶಿವನಾಗಪ್ಪ ಇವರು ಹೋಟೆಲ್ ಇಟ್ಟುಕೊಂಡು ಜೀವನ ಸಾಗಿಸುತ್ತಿ ದ್ದರು. ಒಮ್ಮೆ ಆಕಸ್ಮಿಕವಾಗಿ ಸಾವಯವ ಕೃಷಿಕ ಸಂಘದ ಒತ್ತಾಯದ ಮೇರೆಗೆ ಬಾಗಲಕೋಟೆ ತಾಲೂಕು ಶಿರೂರಿಗೆ,ಸಾವಯವ ವಿಧಾನದ ಮಾದರಿ ತೋಟಗಳನ್ನು ಮತ್ತು ಹೊಲಗಳನ್ನು ನೋಡಿ ಬರಲು ಕ್ಷೇತ್ರ ಭೇಟಿಗೆ ಹೋಗಿದ್ದಾಗ, ತಾನೂ ಸಹಿತ ಇದೇ ರೀತಿ ರಾಸಾಯನಿಕಮುಕ್ತವಾದ ಸಾವಯವ ಪದ್ಧತಿಯಲ್ಲಿಯೇ ತೋಟಗಾರಿಕೆ ಬೆಳೆಗಳನ್ನು ಬೆಳೆಯಬೇಕೆಂದು ನಿರ್ಧರಿಸಿದರಂತೆ. ಹಾಗೆಯೇ ಮೊಳಕಾಲ್ಮೂರು ತಾಲೂಕಿನ ಬಿ ಜಿ ಕೆರೆಯ ವೀರಭದ್ರಪ್ಪ ಎಂಬ ಪ್ರಗತಿಪರ ಕೃಷಿಕರ ತೋಟವನ್ನು ವೀಕ್ಷಿಸಲು ಹೋದಾಗ ಅದರಿಂದ ಸ್ಫೂರ್ತಿಯಾಗಿ ತಾನೂ ಪ್ರಯೋಗಿಸಿ ಯಶಸ್ವಿಯಾದೆ ಎನ್ನುತ್ತಾರೆ ಇವರು.

**ಏಳುನೂರು ಅಡಿಕೆ:**



ಶೇಖರಯ್ಯ ಟಿ ಎಚ್ ಎಂ
ಶಿಕ್ಷಕರು, ಕೂಡ್ಲಿಗಿ

Scan For Digital Colourful
HAMPI TIMES E-paper

ತಮ್ಮ ಒಂದು ಕಾಲು ಎಕರೆ ಹೊಲದಲ್ಲಿ ಪ್ರಧಾನ ಬೆಳೆಯಾಗಿ ಏಳುನೂರು ಅಡಿಕೆ ಸಸಿಗಳನ್ನು ನಾಟಿ ಮಾಡಿದ್ದಾರೆ. ಇವುಗಳನ್ನು ಚನ್ನಗಿರಿ ತಾಲೂಕಿನ ಕಂದಗಲ್ಲು ಗ್ರಾಮದಿಂದ ಖರೀದಿಸಿ ತಂದಿದ್ದರಂತೆ. ಪ್ರಸ್ತುತ ಸಸಿಗಳನ್ನು ನೆಟ್ಟು ನಾಲ್ಕು ವರ್ಷ ಆರು ತಿಂಗಳಾಗಿದ್ದು, ಐದನೇ ವರ್ಷದಿಂದ ಫಸಲು ಕೊಡಲು ಆರಂಭಿಸುತ್ತವೆ ಎಂದು ತಿಳಿಸಿದರು. ಅಡಿಕೆ ಸಸಿ ಖರೀದಿ ಮತ್ತು ಇತ್ಯಾದಿಗಳಿಗೆ ಸರಿ ಸುಮಾರು ರೂ.50,000 ಖರ್ಚಾಗಿದೆ ಎಂದು ತಿಳಿಸಿದರು.

**ಮಿಶ್ರಬೆಳೆಯಾಗಿ ಏಳುನೂರು ಬಾಳೆ:**

ಅಡಿಕೆ ಫಸಲಿಗೆ ಬರುವವರೆಗೂ ಆದಾಯಕ್ಕಾಗಿ ಮಿಶ್ರಬೆಳೆಯಾಗಿಬಾಳೆಬೆಳೆಯಬಹುದೆಂಬುದನ್ನು ರೈತ ಸ್ನೇಹಿತರಿಂದ ತಿಳಿದುಕೊಂಡ ಶಿವನಾಗಪ್ಪನವರು ಪರಿಚಿತ ಏಜೆಂಟರ ಮೂಲಕ ಜಿಕೆವಿಕೆ ಬೆಂಗಳೂರಿನಿಂದ ಏಳುನೂರು ಬಾಳೆ ಸಸಿಗಳನ್ನು ನೆಟ್ಟು ಒಂದು ವರ್ಷವಾಗಿದ್ದು,ಇದೀಗ ಸಮೃದ್ಧವಾದ, ಆರೋಗ್ಯಭರಿತ ಬಾಳೆಗೊನೆಗಳನ್ನು ಬಿಡಲಾರಂಭಿಸಿವೆ. ಇದರಿಂದ



ನಾಲ್ಕಾರು ಕಾಸು ಕಂಡ ಮತ್ತು ರಾಸಾಯನಿಕಮುಕ್ತ ಬಾಳೆಹಣ್ಣುಗಳನ್ನು ಬೆಳೆದ ಸಂತೃಪ್ತಿಯಿದೆ ಎನ್ನುತ್ತಾರೆ. ಬಾಳೆ ಸಸಿಗಳಿಗೆ ರೂ.14000 ಮತ್ತು ಕೊಟ್ಟಿಗೆ ಗೊಬ್ಬರಕ್ಕೆ ರೂ.30,000 ಹಣವನ್ನು ವಿನಯೋಗಿಸಿದ್ದಾರಂತೆ. ಪ್ರಸ್ತುತ ತಾವು ಬೆಳೆದ ಬಾಳೆಯ ಗೊನೆಗಳನ್ನು ಕೆ.ಜಿ.ಗೆ ರೂ.15 ರೂಪಾಯಿಗಳಂತೆ ಕೂಡ್ಲಿಗಿ, ಕೊಟ್ಟೂರು, ಚೋರನೂರು ಮಾರುಕಟ್ಟೆಗಳಲ್ಲಿ ಸಗಟು ಮಾರಾಟ ಮಾಡುತ್ತಿರುವುದಾಗಿ ತಿಳಿಸಿದರು.

**ಎಸ್ ವಿ ಸಜ್ಜನ್ ರಿಂದ ಸ್ಫೂರ್ತಿ ಅರಣ್ಯಕೃಷಿ ಆರಂಭ:**

ಕೂಡ್ಲಿಗಿ ತಾಲೂಕಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರಗತಿಪರ ಕೃಷಿಕರಾದ ಶ್ರೀ ಎಸ್ ವಿ ಸಜ್ಜನ್ ರವರ ಅರಣ್ಯಕೃಷಿ ಮಾದರಿಯಿಂದ ಸ್ಫೂರ್ತಿಗೊಂಡು, ತಾವು ಸಹಿತ ಬೆಟ್ಟದನೆಲ್ಲಿ, ನೇರಳೆ, ಜವಾರಿ ಪಪ್ಪಾಯ, ಹುಣಸೆಗಿಡ ಇತ್ಯಾದಿಗಳನ್ನು ಹೊಲದ ಬದುಗಳಲ್ಲಿ ನೆಟ್ಟಿದ್ದಾರೆ.ಇವುಗಳು ಕಡಿಮೆ ನೀರಿನಲ್ಲಿ ಸಮೃದ್ಧವಾಗಿ ಬೆಳೆಯಬಲ್ಲವು ಮತ್ತು ಭವಿಷ್ಯದಲ್ಲಿ ಶಾಶ್ವತ ಆದಾಯ ನೀಡುವ ಮೂಲಗಳಾಗಬಲ್ಲವು ಎಂದು ತಿಳಿಸಿದರು.

**ಹಲವು ಕಡೆ ಭೇಟಿ**

ಸಾವಯವ ವಿಧಾನದ ಮೂಲಕ ಸಮೃದ್ಧವಾಗಿ ಬೆಳೆಗಳನ್ನು ಬೆಳೆಯಲು ಜಿಕೆವಿಕೆ ಬೆಂಗಳೂರಿನ ಬಯೋಪ್ಯಾಚ್ ಮಾದರಿ ವೀಕ್ಷಣೆ ಮತ್ತು ತಮಗೆ ಗೊತ್ತಿರುವ ಹಲವು ರೈತರ ತೋಟಗಳನ್ನು ಭೇಟಿ ಮಾಡಿ ಅದನ್ನು ತಮ್ಮ ತೋಟದಲ್ಲಿ ಅಳವಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರಂತೆ.

**ತಾಳ್ಮೆ ಮುಖ್ಯ ಎನ್ನುತ್ತಾರೆ:**

ಯಾವುದೇ ಕೆಲಸದಲ್ಲಾಗಲಿ ಯಶಸ್ಸು ದೊರಕಬೇಕಾದರೆ ತಾಳ್ಮೆ ಅತಿ ಮುಖ್ಯ. 'ಭೂಮಿತಾಯಿಯನ್ನು ನಂಬಿದವರಿಗೆ ಆಕೆ ಎಂದಿಗೂ ಕೈ ಬಿಡುವುದಿಲ್ಲ' ಎಂಬುದಕ್ಕೆ ತಾನೇ ಸಾಕ್ಷಿ ಎನ್ನುತ್ತಾರೆ ಶಿವನಾಗಪ್ಪನವರು. 'ಕಾಯಕವೇ ಕೈಲಾಸ'ಎಂಬುದೊಂದೆ ತನ್ನ ದುಡಿಮೆಯ ಮೂಲ ಮಂತ್ರ ಎಂದರಿತು ದುಡಿಯುತ್ತಿರುವುದಾಗಿ ತಿಳಿಸಿದರು.

**ಹಲವರಿಗೆ ಸ್ಫೂರ್ತಿ:**

ಹಲವರಿಂದ ಸ್ಫೂರ್ತಿಗೊಂಡು ಆರಂಭಿಸಿದ ಸಾವಯವ ಪದ್ಧತಿಯ ವಿಧಾನವು, ಇವರೇ ಬೇರೆಯವರಿಗೆ ಸ್ಫೂರ್ತಿಯಾಗುವಂತೆ ಮಾಡಿದೆ. ಯಾವಾಗ ಇವರು ಸಮೃದ್ಧವಾದ ಅಡಿಕೆ ಮತ್ತು ಬಾಳೆಯನ್ನು ಬೆಳೆಯುವುದನ್ನು ಕಂಡ ಇದೇ ಗ್ರಾಮದ ಮತ್ತು ಸುತ್ತಮುತ್ತಲಿನ ಗ್ರಾಮದ ಕೆಲ ರೈತರು ಇವರ ತೋಟಕ್ಕೆ ಭೇಟಿಕೊಟ್ಟು, ಇವರಿಂದ ಅಗತ್ಯ ಸಲಹೆ ಸೂಚನೆಗಳನ್ನು ಪಡೆದುಕೊಂಡು ತಾವು ಸಹಿತ ಸಾವಯವ ಪದ್ಧತಿಯಲ್ಲಿ ಬೆಳೆ ಬೆಳೆಯಲು ಆರಂಭಿಸಿರುವುದು ಇವರ ಖುಷಿಯನ್ನು ನೂರ್ಮಡಿಗೊಳಿಸಿದೆ.

ಅಡಿಕೆ ಮತ್ತು ಬಾಳೆಯ ವ್ಯರ್ಥಪದಾರ್ಥಗಳೇ ಗೊಬ್ಬರ:

ರಾಸಾಯನಿಕ ಗೊಬ್ಬರಗಳ ಮೋಹಕ್ಕೆ ಒಳಗಾಗಿ ಹೆಚ್ಚಿನ ಹಣವನ್ನು ವ್ಯಯಿಸಿ ಕೈ ಸುಟ್ಟುಕೊಳ್ಳುವ ಬದಲು, ಬಿದ್ದಿರುವ ಅಡಿಕೆ ಮತ್ತು ಬಾಳೆಯ ವ್ಯರ್ಥ ಪದಾರ್ಥಗಳನ್ನೇ ಮಡಿಗಳ ಮಧ್ಯದಲ್ಲಿ ಹಾಕಿ, ಸ್ವಲ್ಪ ಮಣ್ಣು ಸೇರಿಸಿದಾಗ ಪೌಷ್ಟಿಕವಾದ ಸಾವಯವ ಗೊಬ್ಬರ ಗೊತ್ತಿಲ್ಲದೇ ತಯಾರಾಗಿ, ಸಮೃದ್ಧ ಬೆಳೆಗೆ ಕಾರಣವಾಗುತ್ತದೆ ಎನ್ನುತ್ತಾರೆ ಶಿವನಾಗಪ್ಪನವರು.

**ಕೂಲಿ ಕಾರ್ಮಿಕರದ್ದೆ ಸ್ವಲ್ಪಮಟ್ಟಿಗೆ ಸಮಸ್ಯೆ:**

ಮಡಿ ಮಾಡುವ ಮತ್ತು ಇನ್ನಿತರ ಕೆಲಸಗಳ ಸಂದರ್ಭದಲ್ಲಿ ಕೂಲಿ ಕಾರ್ಮಿಕರು ದೊರೆಯುವುದು ಸ್ವಲ್ಪ ಕಷ್ಟದ ಕೆಲಸ,ಆಗ ಅನಿವಾರ್ಯವಾಗಿ ದುಪ್ಪಟ್ಟು ಬೆಲೆಯನ್ನು ಕೊಟ್ಟು ಕೆಲಸಕ್ಕೆ ಕರೆದುಕೊಳ್ಳಬೇಕಾದ ಅನಿವಾರ್ಯತೆ ಇದೆ ಎನ್ನುತ್ತಾರೆ ಇವರು.

**ಮಗುವಿನಂತೆ ನೋಡಿಕೊಳ್ಳಬೇಕು:**

ಸಸಿಗಳನ್ನು ನೆಟ್ಟ ಆರಂಭದಲ್ಲಿ ಕಡ್ಡಾಯವಾಗಿ ಚಿಕ್ಕಮಕ್ಕಳನ್ನು ನೋಡಿಕೊಳ್ಳುವ ಹಾಗೆ ನೋಡಿಕೊಳ್ಳಲೇಬೇಕು. ಇಲ್ಲದಿದ್ದರೆ ಸಸಿಗಳು ಹಾಳಾಗುವ ಸಂಭವವಿದೆ ಎನ್ನುತ್ತಾರೆ ಇವರು.

**ಸಾವಯವವೇ ಮದ್ದಾಗಬೇಕು:**

ಇಂದಿನ ರಾಸಾಯನಿಕಯುಕ್ತ ಆಹಾರವೇ ಎಷ್ಟೋ ಕಾಯಿಲೆಗಳಿಗೆ ಕಾರಣವಾಗಿದೆ. ಆದ್ದರಿಂದ ಮನುಷ್ಯನ ಆರೋಗ್ಯಕ್ಕೆ ಕಾರಣವಾದ ಸಾವಯವ ಪದ್ಧತಿಯ ಮೂಲಕ ಬೆಳೆದ ಆಹಾರ ಪದಾರ್ಥಗಳ ಬಳಕೆ ಅತಿ ತುರ್ತು ಮತ್ತು ಅನಿವಾರ್ಯವಾಗಿದೆ ಎನ್ನುತ್ತಾರೆ ಇವರು. ಈ ನಿಟ್ಟಿನಲ್ಲಿ ಎಲ್ಲಾ ರೈತರು ಮುಂದಾಗಲಿ ಎಂಬುದು ಅವರ ಆಶಯ.

**ಕೊನೆಯ ಮಾತು:**


ಅಸಾಧ್ಯವಾದುದನ್ನು ಸಾಧ್ಯವಾಗಿಸಿ,ಬಯಲುಸೀಮೆಯಲ್ಲಿ ಸಮೃದ್ಧವಾಗಿ ವಿಶೇಷವಾಗಿ ಸಾವಯವ ವಿಧಾನದಲ್ಲಿ ಅಡಿಕೆ ಮತ್ತು ಬಾಳೆಯ ಜೊತೆಯಲ್ಲಿಯೇ ಅರಣ್ಯ ಕೃಷಿಯನ್ನು ಆರಂಭಿಸಿರುವ ಶಿವನಾಗಪ್ಪನವರಿಗೆ ಯಶಸ್ಸು ದೊರೆಯಲಿ. ಅವರಿಂದ ಸ್ಫೂರ್ತಿಗೊಂಡು ಎಲ್ಲರೂ ಸಾವಯವ ವಿಧಾನದಲ್ಲೇ ಬೆಳೆಗಳನ್ನು ಬೆಳೆಯುವಂತಾಗಲಿ.

## ಕವಿ ಮನಸು

### ಸಾಂಗತ್ಯ

ಆತ್ಮ ಮತ್ತು ಅಧ್ಯಾತ್ಮದ ಸಾಂಗತ್ಯ
ಬರೆದಂತೆ ಸುಂದರ ಕಾವ್ಯ.
ತನ್ನನ್ನು ತಾನು ಅರಿಯಲು ಸಾಧ್ಯ
ತೊರೆದರಷ್ಟೇ ಚಂಚಲತೆ ಎಂಬ ಮಿಥ್ಯ.
ಸದ್ವಿಚಾರಗಳ ಬಗೆಗಿನ ಪ್ರಾಶಸ್ತ್ಯ
ಹೆಚ್ಚಿಸುವುದು ತನು ಮನದ ಲಾಲಿತ್ಯ.

– ಮಂಜುಶ್ರೀ ಮುರಳೀಧರ್.



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 11–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1613.87 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 6813 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 45.787 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1588.00 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 82 ಕ್ಯುಸೆಕ್ |
| ಸಾಮರ್ಥ್ಯ | 9.438 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

12–02–2025 – ಬುಧವಾರ

| | |
|---|---|
| ತಿಥಿ | : ಹುಣ್ಣಿಮೆ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆಶ್ಲೇಷ |
| ಯೋಗ | : ಸೌಭಾಗ್ಯ |
| ಕರಣ | : ವಿಷ್ಟಿ(ಭದ್ರ) |
| ಸೂರ್ಯೋದಯ | : 07:02:27 |
| ಸೂರ್ಯಾಸ್ತ | : 18:20:07 |
| ರಾಹು ಕಾಲ | : 12:41–14:06 |
| ಯಮಘಂಡ ಕಾಲ | : 08:27–09:52 |
| ಗುಳಿಕ ಕಾಲ | : 11:17–12:41 |

## ಹಿರಿಯ ಸಾಹಿತಿ ಎನ್.ಡಿ.ವೆಂಕಮ್ಮ ಅಭಿಮತ

# ಸಂವಿಧಾನವು ಪವಿತ್ರ ಗ್ರಂಥ



■ ಹಂಪಿ ಟೈಮ್ಸ್ ಬಳ್ಳಾರಿ

ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದ ಕಾನೂನು ವ್ಯಾಪ್ತಿಯಲ್ಲಿ ನಾವೆಲ್ಲರೂ ಒಳಗೊಂಡಿದ್ದೇವೆ. ಅವರು ಬರೆದಿರುವ ಸಂವಿಧಾನವು ಪ್ರತಿಯೊಬ್ಬ ನಾಗರಿಕರಿಗೆ ಪವಿತ್ರ ಗ್ರಂಥವಾಗಿದೆ ಎಂದು ಸಾಹಿತಿ ಹಾಗೂ ಬಾಬು ಜಗಜೀವನ್ ರಾಂ ಪ್ರಶಸ್ತಿ ಪುರಸ್ಕೃತರಾದ ಎನ್.ಡಿ.ವೆಂಕಮ್ಮ ಅವರು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ರವರ ಬದುಕು ಮತ್ತು ಸಾಧನೆಗಳ ಪರಿಚಯ ಕುರಿತು ಮಂಗಳವಾರ ಏರ್ಪಡಿಸಿದ್ದ "ಅಂಬೇಡ್ಕರ್ ಓದು" ಕಾರ್ಯಕ್ರಮವನ್ನು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹ ಸಾಮಾಜಿಕ ನ್ಯಾಯ ಒದಗಿಸಿಕೊಡುವ ರೀತಿಯಲ್ಲಿ ಸಂವಿಧಾನ ರಚಿಸಿದ್ದಾರೆ. ಅರ್ಥಪೂರ್ಣ ಮೂಲಭೂತ ಹಕ್ಕುಗಳು ಹಾಗೂ ಕರ್ತವ್ಯಗಳನ್ನು ನೀಡಿದ್ದಾರೆ. ಮಹಿಳೆಯರಿಗೆ ಸಮಾನತೆ ಹಕ್ಕು, ಕಡ್ಡಾಯ ಶಿಕ್ಷಣ ಹಾಗೂ ಕಠಿಣ ಶ್ರಮದಿಂದಾಗಿ ಶೋಷಿತ ಸಮುದಾಯಗಳು, ರೈತರು, ಕಾರ್ಮಿಕರು ಇತರೆ ವರ್ಗದವರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಬಲರಾಗಲು ಶಕ್ತಿ ತುಂಬಿದ್ದಾರೆ. ಇಂದಿನ ಯುವಜನತೆಗೆ ಅಂಬೇಡ್ಕರ್ ಅವರು ಮಾದರಿಯಾಗಿದ್ದು, ಅವರು ನಡೆದ ದಾರಿಯಲ್ಲಿ ನಾವೆಲ್ಲರೂ ಸಾಗಬೇಕು ಎಂದು ಕರೆ ನೀಡಿದರು.

ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಪದವಿ ಪೂರ್ವ ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರಾದ ಎಂ.ಕಾತ್ಯಾಯಿನಿ ಮರಿದೇವಯ್ಯ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂಬೇಡ್ಕರ್ ರವರ ವಿಚಾರ-ಧಾರೆಗಳನ್ನು ಅರಿತುಕೊಳ್ಳಬೇಕು. ವಿದ್ಯಾರ್ಥಿಗಳು ಅವರ ಪುಸ್ತಕಗಳನ್ನು ಓದುವ ಮೂಲಕ ಪ್ರಜ್ಞಾವಂತರಾಗಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸಹಾಯಕ ಪ್ರಾಧ್ಯಾಪಕ ಅಲಂಭಾಷ ಉಪನ್ಯಾಸ ನೀಡಿದರು. ಇದೇ ವೇಳೆ ಸಂವಿಧಾನದ ಪೀಠಿಕೆಯ ಪ್ರತಿಜ್ಞೆಯನ್ನು ಭೋದಿಸಲಾಯಿತು. ಕಾರ್ಯಕ್ರಮದಲ್ಲಿ ಚಿಗುರು ಕಲಾ ತಂಡದ ಹುಲುಗಪ್ಪ ಎಸ್.ಎಂ ಅವರ ಸಂಗಡಿಗರಿಂದ ಜಾನಪದ ಸಂಗೀತ ಗಾಯನಗಳನ್ನು ಪ್ರಸ್ತುತ ಪಡಿಸಿದರು. ಡಾ. ಬಿ.ಆರ್.ಅಂಬೇಡ್ಕರ್‌ರವರ ಬದುಕು ಮತ್ತು ಸಾಧನೆಗಳ ಪರಿಚಯ ಕುರಿತು ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಪುಸ್ತಕ ರೂಪದಲ್ಲಿ ಬಹುಮಾನ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಬಿ.ನಾಗರಾಜ್, ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಡಾ.ಬಿ.ಗೋವಿಂದರಾಜ, ಸೇಂಟ್ ಜಾನ್ಸ್ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಹೆಚ್.ಎಸ್.ಶಿವರಾಂ, ಸರ್ಕಾರಿ (ಮಾಜಿ ಪುರಸಭೆ) ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಪಿ.ನಾಗೇಶ್ವರ ರಾವ್, ವಾಡ್ಲಾ಼ ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ವಿಕ್ಟರ್ ಇಮ್ಯಾನುವೇಲ್ ಸೇರಿದಂತೆ ಭೋದಕ-ಭೋದಕೇತರ ವರ್ಗ, ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹಾಗೂ ಇತರರು ಉಪಸ್ಥಿತರಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 37 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

### ಪಾಸಿಂಗ್ ಪತ್ರಿಕೆ – 2

ಗಣಿತ ಪಾಸಾಗಲು ಅತೀ ಸುಲಭವಾಗಿ ಕಲಿಯಬೇಕಾದ ಅಂಶಗಳನ್ನು ನೀಡುತ್ತಿದ್ದೇವೆ. ಕಲಿತು ಪಾಸಾಗಿರಿ

ಮುಂದುವರೆದ ಭಾಗ......

22) $2+\sqrt{5}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.

23) "ಎರಡು ತ್ರಿಭುಜಗಳಲ್ಲಿ ಅನುರೂಪ ಕೋನಗಳು ಸಮವಾದರೆ ಅವುಗಳ ಅನುರೂಪ ಬಾಹುಗಳ ಅನುಪಾತಗಳು ಸಮ (ಅಥವಾ ಸಮಾನುಪಾತ) ದಲ್ಲಿದ್ದರೆ, ಆ ತ್ರಿಭುಜಗಳು ಸಮರೂಪವಾಗಿರುತ್ತವೆ" ಎಂದು ಸಾಧಿಸಿ.

24) (4, -3) ಮತ್ತು (8, 5) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು ಆಂತರಿಕವಾಗಿ 3:2 ರ ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

25) $\frac{tan\theta-1+sec\theta}{tan\theta+1-sec\theta}$ $\sec\theta + \tan\theta$ ಎಂದು ಸಾಧಿಸಿ

26) "ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ" ಎಂದು ಸಾಧಿಸಿ.

26) 21) ಈ ಕೆಳಗಿನ ದತ್ತಾಂಶಗಳಿಗೆ ನೇರ ವಿಧಾನದಿಂದ ಸರಾಸರಿ, ಮಧ್ಯಾಂಕ ಮತ್ತು ಬಹುಲಕವನ್ನು ಕಂಡುಹಿಡಿಯಿರಿ

| ವರ್ಗಾಂತರ | 1-5 | 5-10 | 10-15 | 15-20 | 20-25 |
|---|---|---|---|---|---|
| ಆವೃತ್ತಿ | 6 | 2 | 7 | 9 | 5 |

27) 4.2 ಸೆಂ.ಮೀ ತ್ರಿಜ್ಯವುಳ್ಳ ಲೋಹದ ಗೋಳವನ್ನು ಕರಗಿಸಿ ಅದನ್ನು 6ಸೆಂ.ಮೀ ತ್ರಿಜ್ಯವಿರುವ ಸಿಲಿಂಡರಿನ ಆಕಾರ ನೀಡಲಾಗಿದೆ. ಹಾಗಾದರೆ ಆ ಸಿಲಿಂಡರಿನ ಎತ್ತರವನ್ನು ಕಂಡುಹಿಡಿಯಿರಿ.

28) ಒಂದು ಪೆಟ್ಟಿಗೆಯಲ್ಲಿ 13 ಕೆಂಪು , 12 ನೀಲಿ ಮತ್ತು 9 ಹಸಿರು ಪೆನ್ನುಗಳಿವೆ. ಯಾದೃಚ್ಛಿಕವಾಗಿ ಒಂದು ಪೆನ್ನು ತಗೆದಾಗ (a) ಹಸಿರು ಪೆನ್ನು ಆಗಿರುವ (b) ಕೆಂಪು ಪೆನ್ನು ಆಗದಿರುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

29) ಪರಿಧಿಯು 22 cm ಇರುವ ಒಂದು ವೃತ್ತ ಚತುರ್ಥಕ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

30) ಒಂದು ಗಡಿಯಾರದಲ್ಲಿ ನಿಮಿಷದ ಮುಳ್ಳಿನ ಉದ್ದವು 14 cm ಆಗಿದೆ. ಐದು ನಿಮಿಷದಲ್ಲಿ ಅದು ಕ್ರಮಿಸಿದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

31) 220 cm ಎತ್ತರ ಮತ್ತು 24 cm ವ್ಯಾಸವನ್ನು ಹೊಂದಿರುವ ಒಂದು ಸಿಲಿಂಡರಿನಾಕಾರದ ಕಬ್ಬಿಣದ ಕಂಬದ ಮೇಲೆ 60 cm ಎತ್ತರ ಮತ್ತು 8 cm ತ್ರಿಜ್ಯ ಇರುವ ಮತ್ತೊಂದು ಸಿಲಿಂಡರನ್ನು ಜೋಡಿಸಿದೆ. 1 cm ಕಬ್ಬಿಣದ ಸರಿಸುಮಾರು ದ್ರವ್ಯರಾಶಿಯು 8 g ಆದರೆ ಕಂಬದ ದ್ರವ್ಯರಾಶಿಯನ್ನು ಕಂಡುಹಿಡಿಯಿರಿ. ($\pi$ = 3.14 ಎಂದು ತೆಗೆದುಕೊಳ್ಳಿ).

32) ಒಂದು ಘನ ಸಿಲಿಂಡರಿನ ಎತ್ತರ 2.4 m ಮತ್ತು ವ್ಯಾಸ 1.4 m ಇದೆ. ಇದರಿಂದ ಒಂದೇ ಎತ್ತರ ಮತ್ತು ಒಂದೇ ವ್ಯಾಸವನ್ನು ಹೊಂದಿರುವ ಒಂದು ಶಂಕುವಿನಾಕಾರದಲ್ಲಿ ಕೊರೆದು ಟೊಳ್ಳಗಿಸಿದೆ. ನೂತನ ಘನದ ಒಟ್ಟು ಮೇಲ್ಮೈ ವಿಸ್ತೀರ್ಣವನ್ನು ಅತ್ಯಂತ ಸಮೀಪದ ಬೆಲೆಗೆ $cm^2$ ನಲ್ಲಿ ಕಂಡುಹಿಡಿಯಿರಿ

33) p(x) = $x^2$ - x - k ಈ ಬಹುಪದೋಕ್ತಿಯ ಒಂದು ಶೂನ್ಯತೆಯು ಶೂನ್ಯತೆಯು 2 ಆದಾಗ k ಬೆಲೆಯನ್ನು ಕಂಡುಹಿಡಿಯಿರಿ.

ಶುಭವಾಗಲಿ ಮುಂದಿನ ವಾರ ಸ್ಕೋರಿಂಗ್ ಪ್ಯಾಕೇಜ್ ನೀಡಲಾಗುವುದು.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಎಂ.ಎಸ್.ಮಂಜುನಾಥ, ಶಿಕ್ಷಕರು, ಚಿಲುಗೋಡು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

• Admissions
• Requirements
• Firm Branding
• Public Notice
• Change of Name

BOOK NOW!

Book Your Advertisements
in Leading Local HAMPI TIMES
Print & Digital News Paper
9482599089 / 9448633038

• Obituary
• Remembrance
• Birthday wish ads
• Events Display &
• Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

# ಕಲಬುರಗಿಯಲ್ಲಿ ಮೀಡಿಯಾ ಫೆಸ್ಟ್-2025

## ಫೆ.17,18 ರಂದು ಉತ್ತರ ಕರ್ನಾಟಕದ ಸುಮಾರು 200 ಪತ್ರಿಕೋದ್ಯಮ ವಿದ್ಯಾರ್ಥಿಗಳು ಭಾಗಿ : ಜಡಿಯಪ್ಪ ಗೆದ್ಲಗಟ್ಟಿ



■ ಹಂಪಿ ಟೈಮ್ಸ್ ಕಲಬುರಗಿ

ಕಲ್ಯಾಣ ಕರ್ನಾಟಕದ ಕೇಂದ್ರಸ್ಥಾನ ಕಲಬುರಗಿಯಲ್ಲಿ ಇದೇ ಮೊದಲ ಬಾರಿಗೆ ಸರ್ಕಾರದಿಂದ ಕಲಬುರಗಿ ಶರಣಬಸವ ವಿಶ್ವವಿದ್ಯಾಲಯದಲ್ಲಿ ಫೆಬ್ರವರಿ 17 ಮತ್ತು 18 ರಂದು ಎರಡು ದಿನಗಳ ಕಾಲ ಭವಿಷ್ಯದಲ್ಲಿ ಪತ್ರಕರ್ತರಾಗುವ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗಾಗಿ ಮೀಡಿಯಾ ಫೆಸ್ಟ್–2025 ಕಾರ್ಯಕ್ರಮ ಆಯೋಜಿಸಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಲಬುರಗಿ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ತಿಳಿಸಿದರು.

ಮಂಗಳವಾರ ಕಲಬುರಗಿ ನಗರದ ಪತ್ರಿಕಾ ಭವನದಲ್ಲಿ ಜಂಟಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಕರ್ನಾಟಕ ಮಾಧ್ಯಮ ಅಕಾಡೆಮಿ, ಶರಣಬಸವ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಕಲಬುರಗಿ ಇವರ ಸಹಯೋಗದೊಂದಿಗೆ ಈ ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು, ಕಾರ್ಯಾಗಾರ, ನುರಿತ ಪತ್ರಕರ್ತರಿಂದ ಗೋಷ್ಠಿ, ಸ್ಪರ್ಧೆಗಳು ನಡೆಯಲಿವೆ. ಕಲಬುರಗಿ ಮತ್ತು ಬೆಳಗಾವಿ ವಿಭಾಗದ ವಿಶ್ವವಿದ್ಯಾಲಯ, ಪದವಿ ಹಾಗೂ ಸ್ನಾತಕೋತ್ತರ ಪದವಿ ಪತ್ರಿಕೋದ್ಯಮ ವಿಭಾಗದ ಸುಮಾರು 200 ವಿದ್ಯಾರ್ಥಿಗಳು ಮತ್ತು ಕಾಲೇಜಿನ ಪ್ರಾಧ್ಯಾಪಕರು ಇದರಲ್ಲಿ ಭಾಗವಹಿಸಲಿದ್ದಾರೆ ಎಂದರು.

ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರತಿಭೆ ಪ್ರದರ್ಶನಕ್ಕೆ ವೇದಿಕೆ: ಶರಣಬಸವ ವಿಶ್ವವಿದ್ಯಾಲಯದ ಪತಿಕೋದ್ಯಮ ಮತ್ತು ಸಮೂಹ ಸಂವಹನ ಸ್ನಾತಕೋತ್ತರ ಪದವಿ ವಿಭಾಗದ ಮುಖ್ಯಸ್ಥ ಟಿ.ವಿ.ಶಿವಾನಂದನ್ ಮಾತನಾಡಿ, ಎರಡು ದಿನಗಳ ಕಾಲ ನಡೆಯುವ ಈ ಮಾಧ್ಯಮೋತ್ಸವದಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು ವೇದಿಕೆ ಒದಗಿಸಲಾಗುತ್ತಿದೆ. ಭವಿಷ್ಯದ ಸ್ಪರ್ಧಾತ್ಮಕ ಪತ್ರಕರ್ತರಲ್ಲಿ ಅತ್ಯುತ್ತಮರನ್ನು ಹೊರತರಲು ಹತ್ತು ಹಲವು ಸ್ಪರ್ಧೆಗಳನ್ನು ವಿನ್ಯಾಸಗೊಳಿಸಿದ್ದು, ಶರಣಬಸವ ವಿಶ್ವವಿದ್ಯಾಲಯದ ಮುಖ್ಯ ಆವರಣದ ವಿವಿಧ ಸ್ಥಳಗಳಲ್ಲಿ ಈ ಸ್ಪರ್ಧೆ ನಡೆಯಲಿವೆ. ಕಾರ್ಯಕ್ರಮ್ಮಕೆ ಆಗಮಿಸುವ ವಿದ್ಯಾರ್ಥಿಗಳಿಗೆ ವಿ.ವಿ.ಯಲ್ಲಿ ವಸತಿ, ಊಟದ ವ್ಯವಸ್ಥೆ ಮಾಡಿದ್ದು, ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ಇಲ್ಲ. ಪ್ರವೇಶ ಸಂಪೂರ್ಣ ಉಚಿತ ಇರಲಿದೆ. ಇನ್ನು ಕರ್ನಾಟಕ ಮಾಧ್ಯಮ ಅಕಾಡೆಮಿಯು ವಿದ್ಯಾರ್ಥಿಗಳ ನೋಂದಣಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

ವೈಯಕ್ತಿಕ ಸ್ಪರ್ಧೆಗಳು ಮತ್ತು ಗುಂಪು ಸ್ಪರ್ಧೆಗಳು ಎಂದು ಎರಡು ವಿಭಾಗಗಳಾಗಿ ಸ್ಪರ್ಧೆಗಳನ್ನು ವಿಂಗಡಿಸಲಾಗಿದೆ. ವೈಯಕ್ತಿಕ ಸ್ಪರ್ಧೆಗಳಲ್ಲಿ ನೇರ ಪತ್ರಿಕಾಗೋಷ್ಠಿ ವರದಿ ಮಾಡುವಿಕೆ, ಪಿಟಿಸಿ ಮತ್ತು ಟಿವಿ ವರದಿ ಮಾಡುವಿಕೆ, ಸ್ಪಾಟ್ ಛಾಯಾಗ್ರಹಣ, ರೇಡಿಯೋ ಜಾಕಿ, ನುಡಿಚಿತ್ರ, ಜಾಹೀರಾತು ಬರವಣಿಗೆ, ಸಾಮಾಜಿಕ ಮಾಧ್ಯಮದ ವರದಿ ಮಾಡುವಿಕೆ ಮತ್ತು ಮುಖ್ಯಾಂಶಗಳನ್ನು ಬರೆಯುವ ಕಲೆ ಸೇರಿವೆ. ಗುಂಪು ಸ್ಪರ್ಧೆಗಳಲ್ಲಿ ಪ್ರಚಲಿತ ವಿದ್ಯಮಾನಗಳ ಕುರಿತು ರಸಪ್ರಶ್ನೆ, "ನಮ್ಮೂರ ಭಾಷೆ, ವರವಾ? ಶಾಪವಾ?" ಚರ್ಚಾ ಸ್ಪರ್ಧೆ ಸೇರಿದೆ ಎಂದರು.

ಕಲ್ಯಾಣ ಕರ್ನಾಟಕ ಮಾಧ್ಯಮೋತ್ಸವದ ಮತ್ತೊಂದು ವೈಶಿಷ್ಟವೆಂದರೆ ಉದಯೋನ್ಮುಖ ಪತ್ರಕರ್ತರ ಕೌಶಲ್ಯಗಳನ್ನು ಉತ್ತಮಗೊಳಿಸುವ ಎರಡು ಕಾರ್ಯಾಗಾರಗಳು ಹಮ್ಮಿಕೊಳ್ಳಲಾಗಿದೆ. ಮೊದಲ ಕಾರ್ಯಾಗಾರದಲ್ಲಿ ಹಿರಿಯ ಪತ್ರಕರ್ತ ಹಾಗೂ ನಟ, ನಿರ್ದೇಶಕ ಮತ್ತು ಆಲ್ಮಾ ಮೀಡಿಯಾದ ಸಂಸ್ಥಾಪಕರಾದ ಗೌರೀಶ್ ಅಕ್ಕಿ, ಮಾಧ್ಯಮದ ಸ್ಪರ್ಧಾತ್ಮಕ ಜಗತ್ತನ್ನು ಪ್ರವೇಶಿಸುವ ಹಾಗೂ ಸವಾಲುಗಳನ್ನು ಎದುರಿಸಲು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದ ವಿದ್ಯಾರ್ಥಿಗಳನ್ನು ಪರಿಣಾಮಕಾರಿಯಾಗಿ ಸಿದ್ಧಪಡಿಸುವ ಕುರಿತು ಮಾತನಾಡಲಿದ್ದಾರೆ. ಎರಡನೇ ಕಾರ್ಯಾಗಾರದಲ್ಲಿ ನಕಲಿ ಸುದ್ದಿಗಳನ್ನು ಹೇಗೆ ಗುರುತಿಸುವುದು ಎಂಬುದರ ಕುರಿತು ಮಣಿಪಾಲ ಉನ್ನತ ಶಿಕ್ಷಣ ಅಕಾಡೆಮಿಯ ಹಿರಿಯ ಪತ್ರಕರ್ತೆ ಹಾಗೂ ಪ್ರಾಧ್ಯಾಪಕಿ ಪ್ರೊ. ಕಾಂಚನ ಕೌರ್ ಮಾತನಾಡಲಿದ್ದಾರೆ ಎಂದು ಕಾರ್ಯಕ್ರಮದ ರೂಪುರೇಷೆ ಕುರಿತು ವಿವರಿಸಿದ ಟಿ.ವಿ.ಶಿವಾನಂದನ್ ಅವರು, ಎರಡು ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹ ನಡೆಯಲಿವೆ ಎಂದರು.

ಫೆಬ್ರವರಿ 17 ರಂದು ಕೆ.ಕೆ.ಆರ್.ಡಿ.ಬಿ ಅಧ್ಯಕ್ಷ ಡಾ. ಅಜಯ್ ಸಿಂಗ್ ಅವರು ಮೀಡಿಯಾ ಫೆಸ್ಟ್ ಉದ್ಘಾಟಿಸಲಿದ್ದಾರೆ. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಚೇರಪರ್ಸನ್ ಡಾ. ದಾಕ್ಷಾಯಿಣಿ ಅವ್ವಾಜಿ ಮತ್ತು ಸಂಸ್ಥಾನದ 9ನೇ ಪೀಠಾಧಿಪತಿ ಪೂಜ್ಯ ಚಿರಂಜೀವಿ ದೊಡ್ಡಪ್ಪ ಅಪ್ಪಾಜಿಯವರ ದಿವ್ಯ ಸಾನಿಧ್ಯದಲ್ಲಿ ನಡೆಯುವ ಈ ಸಮಾರಂಭದಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಆಯೇಷಾ ಖಾನಮ್, ಕೊಪ್ಪಳ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಬಿ. ಕೆ. ರವಿ, ಶರಣಬಸವ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಅನಿಲ್‌ಕುಮಾರ್ ಬಿಡವೆ, ಗುಲಬರ್ಗಾ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಶ್ರೀರಾಮುಲು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ಭವಾನಿ ಸಿಂಗ್, ಕಲಬುರಗಿ ಘಟಕದ ಅಧ್ಯಕ್ಷ ಬಾಬುರಾವ್ ಯಡ್ರಾಮಿ ಮತ್ತು ಇನ್ನಿತರ ಗಣ್ಯರು ಈ ಮಾಧ್ಯಮೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.

ಫೆಬ್ರವರಿ 18 ರಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಅವರು ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ಕಲಬುರಗಿಯ ಉತ್ತರ ಮತಕ್ಷೇತ್ರದ ಶಾಸಕಿ ಖನೀಜ್ ಫಾತಿಮಾ, ಕಲಬುರಗಿಯ ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಮತ್ತು ಇತರ ಚುನಾಯಿತ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜರ್ ಆಲಂ ಖಾನ್ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಿದ್ದಾರೆ ಎಂದು ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ಭವಾನಿ ಸಿಂಗ್, ಕಲಬುರಗಿ ಘಟಕದ ಜಿಲ್ಲಾಧ್ಯಕ್ಷ ಬಾಬುರಾವ್ ಯಡ್ರಾಮಿ ಇದ್ದರು.



ಹಗರಿಬೊಮ್ಮನಹಳ್ಳಿ ಪುರಸಭಾ ಸಭಾಂಗಣದಲ್ಲಿ ಸೋಮವಾರ ಕಾಯಕ ಶರಣರ ಜಯಂತಿಯನ್ನು ಆಚರಿಸಲಾಯಿತು. ಪುರಸಭೆ ಅಧ್ಯಕ್ಷ ಎಂ.ಮರಿರಾಮಪ್ಪ, ಮುಖ್ಯಾಧಿಕಾರಿ ಪ್ರಭಾಕರ ಪಾಟೀಲ್, ಸದಸ್ಯರು ಹಾಗೂ ಸಿಬ್ಬಂದಿ ಪೂಜೆ ಸಲ್ಲಿಸಿದರು.

# ತಪ್ಪಿತಸ್ಥರ ವಿರುದ್ಧ ಕ್ರಮ ನಿಶ್ಚಿತ

## ವೈದ್ಯರಿಗೆ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಖಡಕ್ ಎಚ್ಚರಿಕೆ



■ ಹಂಪಿ ಟೈಮ್ಸ್ ಕೂಡ್ಲಿಗಿ

ಆಸ್ಪತ್ರೆ ಸ್ವಚ್ಛತೆ ಸೇರಿದಂತೆ ಅವ್ಯವಸ್ಥೆ ಆಗರವಾಗಿದೆ ಈ ಕೂಡಲೇ ಬದಲಾವಣೆ ಮಾಡಿಕೊಳ್ಳಿ ಎಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಖಡಕ್ ಎಚ್ಚರಿಕೆ ನೀಡಿದರು.

ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಸೋಮವಾರ ಸಂಜೆ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ವೈದ್ಯರು ಸೇರಿದಂತೆ ಸಿಬ್ಬಂದಿಗಳಿಗೆ ಸೂಚನೆ ನೀಡಿದರು. ಭಾನುವಾರ ತಡರಾತ್ರಿ ಆಸ್ಪತ್ರೆಯಲ್ಲಿ ವಿದ್ಯುತ್ ಇಲ್ಲದೆ ಬಾಣಂತಿಯರು, ನವ ಜಾತ ಶಿಶುಗಳಿಗೆ ತೊಂದರೆಯಾಗಿತ್ತು ಎನ್ನುವ ವಿಡಿಯೋ ವೈರಲ್ ಆಗಿದೆ. ಆಸ್ಪತ್ರೆಯಲ್ಲಿ ಜನರೇಟರ್ ವ್ಯವಸ್ಥೆ ಇಲ್ಲವಾ ಅಥವಾ ಸಿಬ್ಬಂದಿಗಳ ಅಜಾಗರೂ ಕತೆಯ ಎಂದು ಸ್ಥಳದಲ್ಲಿದ್ದ ಆಡಳಿತ ವೈಧ್ಯಾಧಿಕಾರಿ ಡಾ.ಮಧು ಅವರನ್ನು ಪ್ರಶ್ನಿಸಿದರು. ಆ ರಾತ್ರಿ ಕರ್ತವ್ಯದಲ್ಲಿದ್ದ ವೈದ್ಯ ಡಾ.ರವಿ ಕುಮಾರ್ ಹಾಗೂ ಸಿಬ್ಬಂದಿಗಳು ಮಾತನಾಡಿ, ಭಾನುವಾರ ತಡ ರಾತ್ರಿ ಸುಮಾರು 3 ಹೆರಿಗೆ ಆಗಿದ್ದು, ಶಸ್ತ್ರ ಚಿಕಿತ್ಸಾ ಕೊಠಡಿ, ಹೆರಿಗೆ ಸೇರಿದಂತೆ ಪ್ರಸೂತಿ ಕೊಠಡಿಗಳಲ್ಲಿ ವಿದ್ಯುತ್ ವ್ಯತ್ಯಯ ಆಗಿಲ್ಲ ಎಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಅವರಿಗೆ ಮನವರಿಕೆ ಮಾಡಿದರು. ಇದಕ್ಕೆ ಶಾಸಕ ಎನ್.ಟಿ.ಶ್ರೀನಿವಾಸ್ ಉತ್ತರಿಸಿ ಈ ರೀತಿಯ ವಿಡಿಯೋ ಮಾಡಿದವರ ಬಗ್ಗೆ ಮಾಹಿತಿ ಕಲೆಹಾಕಿ ತಪ್ಪಿದ್ದರೆ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು, ಇದರಲ್ಲಿ ಆಸ್ಪತ್ರೆಯ ಸಿಬ್ಬಂದಿಗಳ ತಪ್ಪು ಕಂಡು ಬಂದಲ್ಲಿ ನಿಮ್ಮ ಮೇಲೆ ಕ್ರಮ ಜರುಗಿಸಲಾ ಗುವುದು ಎಂದರು.

ಇನ್ನೂ ಆಸ್ಪತ್ರೆಯಲ್ಲಿ ಬಾಣಂತಿಯರಿಗೆ ನೀಡುವ ಆಹಾರ ಅತ್ಯಂತ ಕಳಪೆಯಾಗಿರುತ್ತದೆ ಈ ಬಗ್ಗೆ ಅಧೀಕ್ಷಕರು ಗಮನ ಹರಿಸಬೇಕು ಎಂದು ಪೌರಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಪ್ರಭಾಕರ ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಅನೇಕ ಬಾರಿ ತಿಳಿಸಿದ್ದು ಸಂಭಂದಿಸಿದ ಸಿಬ್ಬಂದಿಗಳು ಜವಾಬ್ದಾರಿ ಅರಿತು ಕರ್ತವ್ಯ ನಿರ್ವಹಿಸಿ ಎಂದು ಶಾಸಕ ಸೂಚಿಸಿದರು. ಡಿಎಚ್‌ಓ ಡಾ.ಶಂಕರ ನಾಯ್ಕ್, ಟಿಎಚ್‌ಓ ಡಾ.ಎಸ್.ಪಿ.ಪ್ರದೀಪ್ ಕುಮಾರ್, ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಇದ್ದರು.

# ರೈಲ್ವೇ ಕಾಮಗಾರಿ ವಾಹನ ಸಂಚಾರ ನಿರ್ಬಂಧ

■ ಹಂಪಿ ಟೈಮ್ಸ್ ಬಳ್ಳಾರಿ

ನಗರದ ಕಂಟೋನ್‌ಮೆಂಟ್‌ನ ರೈಲ್ವೇ ಗೇಟ್ ಬಳಿ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಫೆ.11 ರ ರಾತ್ರಿ 10 ಗಂಟೆಯಿಂದ ಫೆ.12 ರ ಬೆಳಿಗ್ಗೆ 06 ಗಂಟೆಯ ವರೆಗೆ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ ಎಂದು ರೈಲ್ವೇ ಅಧಿಕಾರಿಗಳು ತಿಳಿಸಿದ್ದಾರೆ.

# ಫೆ.27 ರಂದು ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ

■ ಹಂಪಿ ಟೈಮ್ಸ್ ಬಳ್ಳಾರಿ

ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮವನ್ನು ಫೆ.27 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸಂಡೂರಿನ ಬಿಕೆಜಿ ಇಂಡಸ್ಟ್ರೀಸ್ ಲಿಮಿಟೆಡ್ ಇಲ್ಲಿ ಆಯೋಜಿಸಲಾಗಿದೆ ಎಂದು ಪ್ರಾದೇಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ಅವರು ತಿಳಿಸಿದ್ದಾರೆ.

ಕಾರ್ಮಿಕರ, ಪಿಂಚಣಿದಾರರ ಮತ್ತು ಉದ್ಯೋಗದಾತರರ ಕುಂದು ಕೊರತೆ ಪರಿಹಾರ, ಮಾಹಿತಿ ವಿನಿಮಯ ಮಾಡಿಕೊಳ್ಳಬಹುದು. ಉದ್ಯೋಗದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ, ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆದಾರರಿಗೆ ಲಭ್ಯವಿರುವ ಆನ್‌ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಕುರಿತು ಮಾಹಿತಿ ಒದಗಿಸುವ ಕಾರ್ಯಕ್ರಮವಾಗಿದೆ.

ಕಾರ್ಮಿಕರು, ಪಿಂಚಣಿದಾರರು, ಉದ್ಯೋಗದಾತರು ಫೆ.27 ರಂದು ನಡೆಯುವ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಘಟನೆಗೆ ಸಮರ್ಥನಿದ್ದೇನೆ ಪಕ್ಷದ ತೀರ್ಮಾನಕ್ಕೆ ಬದ್ಧ

## ಕೂಡ್ಲಿಗಿಯಲ್ಲಿ ಮಾಜಿ ಸಚಿವ ಶ್ರೀ ರಾಮುಲು ಹೇಳಿಕೆ

■ ಹಂಪಿ ಟೈಮ್ಸ್ ಕೂಡ್ಲಿಗಿ

ಅವಕಾಶ ಮಾಡಿಕೊಟ್ಟರೆ ಪಕ್ಷ ಸಂಘಟನೆ ಮಾಡಲು ನಾನು ಎಲ್ಲ ರೀತಿಯಿಂದಲೂ ಸಮರ್ಥನಿದ್ದೇನೆ ಎಂದು ಬಿಜೆಪಿ ಮುಖಂಡ ಹಾಗೂ ಮಾಜಿ ಸಚಿವ ಶ್ರೀ ರಾಮುಲು ಹೇಳಿದರು.

ಪಟ್ಟಣದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಮೇಲಿನ ನಂಬಿಕೆ, ವಿಶ್ವಾಸದಿಂದ ಇಡೀ ರಾಜ್ಯದಲಿ ಕಷ್ಟಪಟ್ಟು ಪಕ್ಷ ಸಂಘಟನೆ ಮಾಡಿದ್ದೇವೆ. ಪಕ್ಷದಲ್ಲಿ ಒಡೆದ ಮನಸ್ಸುಗಳನ್ನು ಒಂದುಗೂಡಿಸಬೇಕು. ಚುನಾವಣೆಯಲ್ಲಿ ಸೋತವರು, ಪಕ್ಷಕ್ಕಾಗಿ ದುಡಿದವರು, ಪಕ್ಷದಲ್ಲಿ ವೈಮನಸ್ಸು ಹೊಂದಿದವರನ್ನು ಒಂದು ಮಾಡಿಕೊಂಡು ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಬೇಕಾಗಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಯಾತ್ರೆ ಮಾಡಲು ಮುಂದಾಗಿದ್ದೇನೆ. ಇದಕ್ಕೆ ಪಕ್ಷದ ವರಿಷ್ಟರೊಂದಿಗೆ ಚರ್ಚೆ ಮಾಡುತ್ತೇನೆ. ಅವರ ನಿರ್ಧಾರವೇ ಅಂತಿಮವಾಗಿರುತ್ತದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತವರು ಶಕ್ತಿವಂತರಿದ್ದಾರೆ. ಬೇರೆ ಕಾರಣಗಳಿಂದ ಕೆಲವರು ನಮ್ಮಿಂದ ದೂರು ಉಳಿದಿದ್ದಾರೆ. ಅಂತವರನ್ನು ಪಕ್ಷದಲ್ಲಿ ತೊಡಗಿಸಿಕೊಳ್ಳುವಂತೆ ವಿಶ್ವಾಸ ಮೂಡಿಸ ಲಾಗುವುದು. ಇದನ್ನು ಮಾಡಲು ನಾನು ಸಿದ್ಧ ಎಂದು ಹೇಳಿದರು.

ಪಕ್ಷದಲ್ಲಿ ಯಾವುದೇ ಬಣಗಳಿಲ್ಲ, ಬಸವನಗೌಡ ಪಾಟೀಲ್ ಯತ್ನಾಳ್ ಮಾಡುತ್ತಿರುವುದು ಪಕ್ಷದ ಸಲುವಾಗಿ. ಭವಿಷ್ಯದಲ್ಲಿ ಪಕ್ಷ ಅಧಿಕಾರಕ್ಕೆ ಬರಬೇಕು. ಪಕ್ಷದ ವರಿಷ್ಟರು ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ದರಾಗಿರಬೇಕು ಎಂದು ಅವರೇ ಹೇಳಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪಕ್ಷದಲ್ಲಿ ಅವಕಾಶಕ್ಕಾಗಿ ಅನೇಕರು ಕೇಳಿದ್ದಾರೆ. ಅವರಲ್ಲಿ ನಾನು ಒಬ್ಬ. ಅಧ್ಯಕ್ಷರಾಗಿ ಅವಕಾಶ ಮಾಡಿಕೊಟ್ಟರೂ, ಕೊಡದೇ ಇದ್ದರೂ ಪಕ್ಷ ಸಂಘಟನೆಯಲ್ಲಿ ತೊಡಗಿಕೊಳ್ಳುತ್ತೇನೆ. ರಾಮುಲು ಪಕ್ಷದ ಹಿತಕ್ಕಾಗಿ ಒಳ್ಳೆಯದನ್ನೇ ಹೇಳುತ್ತಾರೆ ಎಂದು ನನ್ನನ್ನು ಎಲ್ಲರು ಒಪ್ಪಿಕೊಳ್ಳುತ್ತಾರೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತದಿಂದ ಅ ಪಕ್ಷದ ನಾಯಕರು ಹಾಗೂ ರಾಜ್ಯದ ಜನರೂ ಬೇಸತ್ತಿದ್ದಾರೆ. ಇದರ ಸದುಪಯೋಗವನ್ನು ನಾವು ಮಾಡಿಕೊಳ್ಳಬೇಕು. ಇದಕ್ಕಾಗಿ ನಾವು ಎಲ್ಲ ಸಮಸ್ಯೆಗಳನ್ನು ಸರಿಪಡಿಸಿಕೊಂಡು ಹೋಗಬೇಕು. ಎಲ್ಲರನ್ನು ಒಂದುಗೂಡಿಸುವ ಕೆಲಸ ನನಗೆ ಕೊಡಲಿ. ಇದರಲ್ಲಿ ನನ್ನ ಸ್ವಾರ್ಥವಿಲ್ಲ ಎಂದು ಅಧ್ಯಕ್ಷ ಸ್ಥಾನದ ಬೇಡಿಕೆಯನ್ನು ಸಮರ್ಥಿಸಿಕೊಂಡರು.



ಯತ್ನಾಳ್ ಅವರಿಗೆ ಈಗಾಗಲೇ ಎರಡು ಬಾರಿ ನೋಟೀಸ್ ನೀಡಿದ್ದಾರೆ. ಈಗ ಚೆಂಡು ರಾಷ್ಟ್ರೀಯ ನಾಯಕರ ಅಂಗಳ ದಲ್ಲಿದೆ. ಏನು ಮಾಡಬೇಕು ಎಂದು ಅವರು ತೀರ್ಮಾನ ಮಾಡುತ್ತಾರೆ. ವಿಜಯೇಂದ್ರ ಅಸಮರ್ಥರು ಎಂದು ನಾನು ಹೇಳುತ್ತಿಲ್ಲ. ಎಲ್ಲವನ್ನು ಅಧ್ಯಕ್ಷರು ಅಥವಾ ಕೇಂದ್ರ ನಾಯಕರು ಬಂದು ಮಾಡಲು ಸಾಧ್ಯವಿಲ್ಲ. ಅಧ್ಯಕ್ಷರ ಬದಲಾವಣೆ ಎಂದು ಬಂದಾಗ ನನಗೆ ಕೊಡಿ ಎಂದ್ದಿದ್ದೇನೆ ಎಂದರು

ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿದರೆ ಬಡತನ ಹೋಗುವುದಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಹಿಂದು ಧರ್ಮ ಸನಾಥನವಾಗಿದ್ದು, ಇಂತಹ ಧರ್ಮದ ಬಗ್ಗೆ ಇಲ್ಲ ಸಲ್ಲದ ಹೇಳಿಕೆಗಳನ್ನು ನೀಡುವುದು ಯಾರಿಗೂ ಶೋಭೆ ತರುವಂತದಲ್ಲ ಎಂದರು.

ಮುಖಂಡ ಬಿ. ಭೀಮೇಶ್, ಬಿಜೆಪಿ ಮಂಡಲ ಅಧ್ಯಕ್ಷ ಕೆ. ನಾಗರಾಜ, ಪ್ರಧಾನ ಕಾರ್ಯದರ್ಶಿ ಪಿ. ಮಂಜುನಾಥ ನಾಯಕ, ಎಸ್ಸಿ ಮೋರ್ಚಾದ ಕಾರ್ಯದರ್ಶಿ ಸಾಣೆಹಳ್ಳಿ ಹನುಮಂತಪ್ಪ ಭಾಗಿಯಾಗಿದ್ದರು.

For Advertisements : 9448633038

# ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಏಳು ದಿನಗಳೊಳಗಾಗಿ ಮಾಹಿತಿ ಸಲ್ಲಿಸಿ

■ ಹಂಪಿ ಟೈಮ್ಸ್ ಬಳ್ಳಾರಿ

2024–25 ನೇ ಸಾಲಿನಲ್ಲಿ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧಕರ ಅಥವಾ ಲೆಕ್ಕಪರಿಶೋಧನಾ ಫರ್ಮ್‌ನ್ನು ನೇಮಕ ಮಾಡಿಕೊಂಡಿರುವ ಬಗ್ಗೆ ಲೆಕ್ಕಪರಿಶೋಧ ಕರಿಗೆ, ಲೆಕ್ಕಪರಿಶೋಧನಾ ಫರ್ಮಗಳಿಗೆ ಮತ್ತು ಸಹಕಾರ ಸಂಘಗಳ ಲೆಕ್ಕಪರಿ ಶೋಧನಾ ಜಿಲ್ಲಾ ಉಪ ನಿರ್ದೇಶಕರ ಕಚೇರಿಗೆ ವಾರ್ಷಿಕ ಮಹಾಸಭೆ ಜರುಗಿದ ದಿನದಿಂದ ಏಳು ದಿನಗಳೊಳಗಾಗಿ ಮಾಹಿತಿ ಸಲ್ಲಿಸಬೇಕು ಎಂದು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕ ಜೆ. ಎಸ್.ವಿನಾಯಕ ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಒಟ್ಟು 1236 ಕಾರ್ಯನಿರತ ಸಹಕಾರ ಸಂಘಗಳು ಹಾಗೂ 238 ಕಾರ್ಯನಿರತ ಸೌಹಾರ್ದ ಸಹಕಾರಿಗಳು ಇದ್ದು, ಈವರೆಗೂ 576 ಸಹಕಾರ ಸಂಘಗಳು 150 ಸೌಹಾರ್ದ ಸಹಕಾರಿಗಳು ಮಾತ್ರ ವಾಷಿಕ ಮಹಾ ಸಭೆಯಲ್ಲಿ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಂಡಿರುವ ಕುರಿತು ಮಾಹಿತಿ ಸಲ್ಲಿಸಿದ್ದಾರೆ.

ಇನ್ನುಳಿದ 660 ಸಹಕಾರ ಸಂಘಗಳು ಹಾಗೂ 88 ಸೌಹಾರ್ದ ಸಹಕಾರಿ ಸಂಘಗಳು ಆಯ್ಕೆ ಮಾಹಿತಿ ಸಲ್ಲಿಕೆಗೆ ಬಾಕಿ ಇದ್ದು, ಮುಂದಿನ 07 ದಿನಗಳೊಳಾಗಾಗಿ ವಾರ್ಷಿಕ ಮಹಾಸಭೆಯ ನಡುವಳಿಯ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರ ಕಚೇರಿ, ಎಸ್.ಜಿ.ಕಾಲೇಜು ರಸ್ತೆ, ದುರ್ಗಮ್ಮ ಗುಡಿ ಹತ್ತಿರ, ಬಳ್ಳಾರಿ–583103 ಈ ವಿಳಾಸಕ್ಕೆ ಸಲ್ಲಿಸಬೇಕು.

ಇಲ್ಲವಾದಲ್ಲಿ ತಮ್ಮ ಸಂಘದ ಲೆಕ್ಕಪರಿಶೋಧನೆಗಾಗಿ ಕಾನೂನು ರೀತ್ಯಾ ಲೆಕ್ಕಪರಿಶೋಧಕರ ನೇಮಕಾತಿಗೆ ವ್ಯವಸ್ಥೆ ಮಾಡಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿವಿಧ ಸೌಲಭ್ಯಗಳಿಗಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಕುಡತಿನಿ ಪಟ್ಟಣ ಪಂಚಾಯಿತಿ ವತಿಯಿಂದ 2019–20 ಮತ್ತು 2022–23ನೇ ಸಾಲಿನ ಶೇ.5ರ ಎಸ್‌ಎಸ್‌ಪಿ, ಟಿಎಸ್‌ಪಿ ಯೋಜನೆಯ ವೈಯಕ್ತಿಕ ಕಾರ್ಯಕ್ರಮದಡಿ ವಿವಿಧ ಸೌಲಭ್ಯಗಳಿಗಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕುಡತಿನಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ತಿಳಿಸಿದ್ದಾರೆ.

ಕುಡತಿನಿ ಪಟ್ಟಣದ ಪರಿಶಿಷ್ಟ ಜಾತಿಯ ಮೆಡಿಕಲ್ ಮತ್ತು ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸಲು ರೂ.0.72 ಲಕ್ಷ, ಪರಿಶಿಷ್ಟ ಪಂಗಡದ ಮೆಡಿಕಲ್ ಮತ್ತು ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸಲು ರೂ.0.78 ಲಕ್ಷ ಮತ್ತು ವಿಕಲಚೇತನರಿಗೆ ಸ್ವಯಂ ಉದ್ಯೋಗಕ್ಕಾಗಿ ರೂ.1.48 ಲಕ್ಷ ಸಹಾಯಧನ ನೀಡಲಾಗುವುದು.

ಕಚೇರಿಯಿಂದ ಅರ್ಜಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿ ಫೆ.19 ರೊಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕುಡುತಿನಿ ಪಟ್ಟಣ ಪಂಚಾಯಿತಿ ಕಾರ್ಯಾಲಯ ಅಥವಾ ದೂ.08392–248025 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.